ಉಪನಿರ್ದೇಶಕರ ಕಛೇರಿ - ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ಜಿಲ್ಲೆ
ಹಾಗೂ
ಮಂತ್ರ ಫಾರ್ ಚೇಂಜ್ ಸಂಸ್ಥೆ




# ವಿದ್ಯಾದೀಪ

## ವಾರ್ಷಿಕ ವರದಿ

## 2025 - 26

Mantra
Inspire. Enable. Transform.





TIME
365 DAYS
7 DAYS









PICTORIAL FLOWERS CHART
FLOWERS CHART
Karnataka
MULTIPLICATION CHART

# ಪರಿವಿಡಿ


| | | |
|---|---|---|
| 01 | ಕಾರ್ಯಕ್ರಮದ ಪರಿಚಯ | 01-04 |
| 02 | ವರ್ಷದ ನೋಟ | 05 |
| 03 | FLN ಗುರಿ ಸಾಧನೆಗಾಗಿ ಚಟುವಟಿಕೆಯಾಧಾರಿತ ಕಲಿಕೆ | 06-10 |
| 04 | ಪೋಷಕರ ಸಬಲೀಕರಣ ಉಪಕ್ರಮ | 11-13 |
| 05 | ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಉಪಕ್ರಮ | 14-16 |
| 06 | ಪೂರ್ವ ಯೋಜನಾ ಸಭೆ | 17 |
| 07 | ಬ್ಲಾಕ್ ಹಂತದ ಶಾಲಾ ನಾಯಕರ ಕಾರ್ಯಾಗಾರ | 18-19 |
| 08 | ಶೈಕ್ಷಣಿಕ ನಾಯಕರಿಗೆ ನಾಯಕತ್ವ ಕಾರ್ಯಾಗಾರ | 20-22 |
| 09 | ಡಯಟ್ ವಿಷನ್ ಕಾರ್ಯಾಗಾರ | 23 |
| 10 | ಪ್ರಗತಿ ಹೆಜ್ಜೆ | 24-28 |
| 11 | ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆ | 29-30 |
| 12 | DRT ಮತ್ತು BRT | 31-32 |
| 13 | DRT ಸಂಭ್ರಮ | 33 |
| 14 | STEM ಲ್ಯಾಬ್ | 34 |
| 15 | ಯಶೋಗಾಥೆಗಳು | 35-40 |
| 16 | 2026-27 ನೇ ಸಾಲಿನ ಶೈಕ್ಷಣಿಕ ಕಾರ್ಯಕ್ರಮಗಳು | 41 |




# ಕಾರ್ಯಕ್ರಮದ ಪರಿಚಯ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET) ಹಾಗೂ ಮಂತ್ರ4ಚೇಂಜ್ ಸಂಸ್ಥೆಯ ಸಹಯೋಗದೊಂದಿಗೆ ವಿದ್ಯಾದೀಪ ಕಾರ್ಯಕ್ರಮವನ್ನು ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗಿದೆ.

ವಿದ್ಯಾದೀಪ" ಕಾರ್ಯಕ್ರಮವು ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯ ಶೈಕ್ಷಣಿಕ ಪ್ರಗತಿಗಾಗಿ ಶೈಕ್ಷಣಿಕ ನಾಯಕರ ನಾಯಕತ್ವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮವಾಗಿದೆ. ಶೈಕ್ಷಣಿಕ ನಾಯಕರೊಂದಿಗೆ ಪರಸ್ಪರ ಸಮನ್ವಯತೆಯನ್ನು ಸಾಧಿಸುವುದರೊಂದಿಗೆ ಸದೃಢ ಶಾಲಾ ನಾಯಕತ್ವವನ್ನು ಬಲವರ್ಧನೆ ಮಾಡುವುದಾಗಿದೆ. ಇದರ ಮೂಲಕ ಶಾಲೆಗಳ ಸುಧಾರಣೆಗಾಗಿ ಯೋಜನೆಗಳ ಅನುಷ್ಠಾನದೊಂದಿಗೆ ಮಕ್ಕಳ ಸಮಗ್ರ ಕಲಿಕಾ ಅಭಿವೃದ್ಧಿಯನ್ನು ಸಾಧಿಸುವುದು ವಿದ್ಯಾದೀಪ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ. ಈ ಮೂಲಕ DIET ಅಧಿಕಾರಿಗಳು, ಬ್ಲಾಕ್ ಅಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು (CRP ಗಳು) ಮತ್ತು ಶಾಲಾ ನಾಯಕರನ್ನು (ಮುಖ್ಯ ಶಿಕ್ಷಕರು) ಸಬಲೀಕರಣಗೊಳಿಸುವ ಮೂಲಕ ಬಲವಾದ ಬೋಧನಾ ನಾಯಕತ್ವ ಮತ್ತು ಹೆಚ್ಚು ಪರಿಣಾಮಕಾರಿ ಶಾಲಾ ಅಭ್ಯಾಸಗಳನ್ನು ಸಕ್ರಿಯಗೊಳಿಸಿದೆ.



DIET ಅಧಿಕಾರಿಗಳು ಮತ್ತು ಬ್ಲಾಕ್ ಅಧಿಕಾರಿಗಳೊಂದಿಗೆ ನಡೆದ ಯೋಜನಾ ಸಭೆಯ ಮೂಲಕ, DRT (ಜಿಲ್ಲಾ ಸಂಪನ್ಮೂಲ ತಂಡ) ರಚನೆಯೊಂದಿಗೆ ಕಾರ್ಯಕ್ರಮದ ಉಪಕ್ರಮಗಳು ಪ್ರಾರಂಭಗೊಂಡವು. ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಬ್ಲಾಕ್ ಹಂತದ ಅಧಿಕಾರಿಗಳು, CRP ಗಳು ಹಾಗೂ HM ಗಳ ಸಾಮರ್ಥ್ಯವನ್ನು ವೃದ್ಧಿಸಿ, ಶಾಲಾ ಸುಧಾರಣೆಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಅಗತ್ಯವಾದ ಕೌಶಲ್ಯ ಮತ್ತು ಜ್ಞಾನವನ್ನು ಒದಗಿಸುವುದಾಗಿದೆ.
ಈ ಕಾರ್ಯಕ್ರಮದಲ್ಲಿ 150 ಕ್ಕೂ ಹೆಚ್ಚು CRP ಗಳು ಮತ್ತು 1340 ಮುಖ್ಯ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸಿದ್ದಾರೆ. CRP ಗಳು, SL ಗಳು ಹಾಗೂ ವಿದ್ಯಾರ್ಥಿಗಳ ಅಗತ್ಯಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವುದರ ಜೊತೆಗೆ, ಶಾಲಾ ಸುಧಾರಣಾ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ ಪರಿಚಯಿಸಲು DIET ಸಹಯೋಗದಲ್ಲಿ ಜುಲೈ 2024 ರಿಂದ ಕಾರ್ಯಕ್ರಮದ ಅನುಷ್ಠಾನ ಪ್ರಾರಂಭಗೊಂಡಿದೆ.

## ಉದ್ದೇಶಗಳು:

- ಶಾಲಾ ಸುಧಾರಣಾ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು (CRP ಗಳು) ಮತ್ತು ಶಾಲಾ ನಾಯಕರು (ಮುಖ್ಯ ಶಿಕ್ಷಕರು) ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.
- ಬೋಧನಾ ನಾಯಕತ್ವವನ್ನು ಬಲಪಡಿಸುವುದು ಮತ್ತು ಉತ್ತಮ ತರಗತಿ ಅಭ್ಯಾಸಗಳನ್ನು ಬೆಂಬಲಿಸುವುದು.
- ಆಕರ್ಷಕ ಮತ್ತು ಸಮನ್ವಯಿತ ಕಲಿಕಾ ಪರಿಸರಗಳನ್ನು ನಿರ್ಮಿಸುವ ಮೂಲಕ ಮಕ್ಕಳ ಕಲಿಕೆಯ ಅನುಭವಗಳನ್ನು ಸಮೃದ್ಧಿಗೊಳಿಸುವುದು. ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.
- ಶಾಲಾ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಡೇಟಾ ಆಧಾರಿತ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಉತ್ತೇಜಿಸುವುದು ಈ ಉಪಕ್ರಮದ ಪ್ರಮುಖ ಗುರಿಯಾಗಿದೆ.
- ನಿರಂತರ ಮೇಲ್ವಿಚಾರಣೆ, ಮಾರ್ಗದರ್ಶನ ಹಾಗೂ ಬೆಂಬಲವನ್ನು ಒದಗಿಸಲು ಸುಸ್ಥಿರ ವ್ಯವಸ್ಥೆಗಳನ್ನು ಸ್ಥಾಪಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.





# ಶಾಲಾ ಅನುಷ್ಠಾನ ಪ್ರಕ್ರಿಯೆ










**ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ:** ರಚನಾತ್ಮಕ ಮತ್ತು ಆಕರ್ಷಕ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಮಗ್ರ ಅಭಿವೃದ್ಧಿ ಅವಕಾಶಗಳನ್ನು ಒದಗಿಸುವುದು. ಈ ಉಪಕ್ರಮವು ವಿದ್ಯಾರ್ಥಿಗಳ ಸಂವಹನ, ಸಹಯೋಗ, ತಾರ್ಕಿಕತೆ, ನಾಯಕತ್ವ ಮತ್ತು ಗ್ರಹಿಕಾ ಕೌಶಲ್ಯಗಳನ್ನು ನಿರ್ಮಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವ ಮತ್ತು ಕಲಿಕೆಯ ಮಾಲೀಕತ್ವವನ್ನು ತೆಗೆದುಕೊಳ್ಳುವ ಸಕಾರಾತ್ಮಕ ಶಾಲಾ ಸಂಸ್ಕೃತಿಯನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

**ಪೋಷಕರ ಸಬಲೀಕರಣ ಉಪಕ್ರಮ: ಪೊಷಕರ ಭಾಗವಹಿಸುವಿಕೆಗೆ ಅರ್ಥಪೂರ್ಣ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಮಕ್ಕಳ ಶಿಕ್ಷಣದಲ್ಲಿ ಪೋಷಕರ ತೊಡಗಿಸಿಕೊಳ್ಳುವಿಕೆಯನ್ನು ಬಲಪಡಿಸುವುದು. ಈ ಕಾರ್ಯಕ್ರಮವು ನಿಯಮಿತ ಪಾಲಕರ ಸಭೆ, ಮನೆ ಆಧಾರಿತ ಕಲಿಕಾ ಚಟುವಟಿಕೆಗಳು ಮತ್ತು ಪೋಷಕರೊಂದಿಗೆ ನಿರಂತರ ಸಂವಹನವನ್ನು ಪ್ರೋತ್ಸಾಹಿಸುತ್ತದೆ. ಇದು ಮನೆಯಲ್ಲಿ ಬೆಂಬಲಿತ ಕಲಿಕಾ ವಾತಾವರಣವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ, ವಿದ್ಯಾರ್ಥಿಗಳ ಕಲಿಕೆ ಮತ್ತು ಯೋಗಕ್ಷೇಮದ ಕಡೆ ಗಮನಹಿಸುವುದು.**

**FLN ರೀಚ್ ಪ್ರೋಗ್ರಾಂ: ರಚನಾತ್ಮಕ ಮತ್ತು ಆಕರ್ಷಕ ಬೆಳಗಿನ ಸಭೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಮಗ್ರ ಅಭಿವೃದ್ಧಿ ಅವಕಾಶಗಳನ್ನು ಒದಗಿಸುವುದು. ಈ ಉಪಕ್ರಮವು ವಿದ್ಯಾರ್ಥಿಗಳ ಸಂವಹನ, ಸಹಯೋಗ, ತಾರ್ಕಿಕತೆ ಮತ್ತು ಗ್ರಹಿಕಾ ಕೌಶಲ್ಯಗಳನ್ನು ನಿರ್ಮಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವ ಮತ್ತು ಕಲಿಕೆಯ ಮಾಲೀಕತ್ವವನ್ನು ತೆಗೆದುಕೊಳ್ಳುವ ಸಕಾರಾತ್ಮಕ ಶಾಲಾ ಸಂಸ್ಕೃತಿಯನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.**

# ಬದಲಾವಣೆಯ ಸಿದ್ಧಾಂತ

| ಜಿಲ್ಲೆ | ಬ್ಲಾಕ್ | ಕ್ಲಸ್ಟರ್ | ಶಾಲೆ |
|---|---|---|---|
| -ಶೈಕ್ಷಣಿಕ ತರಬೇತಿ, -ನಾಯಕತ್ವ ಅಭಿವೃದ್ಧಿ. -HM & CRP ರವರಿಗಾಗಿ ಕಾರ್ಯಾಗಾರವನ್ನು ಮುನ್ನೆಡೆಸುವುದು. -ಶಾಲಾ ಸುಧಾರಣೆಗಾಗಿ ಸಂಪನ್ಮೂಲಗಳನ್ನು ಒಟ್ಟಾಗಿ ರಚಿಸುವುದು. -ಅನುಷ್ಠಾನವನ್ನು ಪರಿಶೀಲಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು. | -HM & CRP ರವರಿಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳುವುದು. -ಶಾಲಾ ಸುಧಾರಣೆಗಾಗಿ ಸಂಪನ್ಮೂಲಗಳನ್ನು ಒಟ್ಟುಗೂಡಿ ರಚಿಸುವುದು. -ಅನುಷ್ಠಾನವನ್ನು ಪರಿಶೀಲಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು. | -HM ಗಳಿಗೆ ಬೆಂಬಲಿತ ಮೇಲ್ವಿಚಾರಣೆಯಲ್ಲಿ ಸಾಮರ್ಥ್ಯ ನಿರ್ಮಾಣ, ಮತ್ತು HM ಗಳು ಮಾಡಿರುವ ಉತ್ತಮ ಅಭ್ಯಾಸಗಳನ್ನು ಗುರುತಿಸುವುದು. | ಸಾಮರ್ಥ್ಯ ನಿರ್ಮಾಣ, ನಾಯಕತ್ವ ಅಭಿವೃದ್ಧಿ, ಸ್ವಯಂ ಕಲಿಕಾ ಸಂಪನ್ಮೂಲಗಳು, ಶಾಲಾ ಸುಧಾರಣೆಯನ್ನು ಕಾರ್ಯಗತಗೊಳಿಸಿ ಯಶೋಗಾಥೆಗಳನ್ನು ಹಂಚಿಕೊಳ್ಳುವುದು. |



# ವರ್ಷದ ನೋಟ

**97.81%***
ಕಾರ್ಯಕ್ರಮದಾದ್ಯಂತ ಕನಿಷ್ಠ ಒಂದು ಶಾಲಾಭಿವೃದ್ಧಿ ಉಪಕ್ರಮವನ್ನು ಅಳವಡಿಸಿಕೊಂಡಿರುವ ಶಾಲೆಗಳ ಸಂಖ್ಯೆ

**90.30%***
ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿರುವ ಶಾಲೆಗಳ ಸಂಖ್ಯೆ ಹಾಗೂ ಈ ಚಟುವಟಿಕೆಗಳ ಗುಣಮಟ್ಟ ಮತ್ತು ಸ್ಥಿರತೆಯನ್ನು ಪ್ರತಿಬಿಂಬಿಸುತ್ತದೆ.

**35.82%***
ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು (FLN) ಬಲಪಡಿಸಲು ಚಟುವಟಿಕೆ ಆಧಾರಿತ ಕಲಿಕೆ (ABL) ಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಶಾಲೆಗಳ ಸಂಖ್ಯೆ

**59.70%***
ಶಾಲಾ ನಾಯಕರು (SLಗಳು) ಪೋಷಕರ ಸಬಲೀಕರಣ ಉಪಕ್ರಮವನ್ನು ಪರಿಣಾಮಕಾರಿಯಾಗಿ ನಡೆಸಿರುವ ಶಾಲೆಗಳ ಸಂಖ್ಯೆ

ವರದಿ ಮಾಡಲಾದ ದತ್ತಾಂಶವು ತಂಡವು ಸಂಗ್ರಹಿಸಿದ ಮಾದರಿ ದತ್ತಾಂಶದಿಂದ ತೆಗೆದುಕೊಳ್ಳಲಾಗಿದೆ. ಇದು 95% ವಿಶ್ವಾಸಾರ್ಹ ಮತ್ತು 8% ರಷ್ಟು ವ್ಯತ್ಯಾಸದಿಂದ ಕೂಡಿದೆ.



# FLN ಗುರಿ ಸಾಧನೆಗೆ - ಚಟುವಟಿಕೆ ಆಧಾರಿತ ಕಲಿಕೆ

*ಚಟುವಟಿಕೆ ಆಧಾರಿತ ಕಲಿಕೆಯು (ABL) ಮಕ್ಕಳ ಕೇಂದ್ರಿತ ವಿಧಾನವಾಗಿದ್ದು, ಇದು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು ಅಭಿವೃದ್ಧಿಪಡಿಸಲು ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಂವಾದಾತ್ಮಕ, ಪ್ರಾಯೋಗಿಕತೆಯನ್ನು ಬೆಳೆಸಲು ಸಹಾಯ ಮಾಡುತ್ತದೆ.*



**FLN ಕಾರ್ಯಕ್ರಮದಲ್ಲಿ ABL ನ ಪ್ರಮುಖ ಅಂಶಗಳು:**

**ವಿದ್ಯಾರ್ಥಿ-ಕೇಂದ್ರಿತ ಕಲಿಕೆ**: ಮಕ್ಕಳ ವಿಭಿನ್ನ ಸಾಮರ್ಥ್ಯ ಮಟ್ಟಗಳಿಗೆ ಅನುಗುಣವಾಗಿ ರಚಿಸಲಾದ ಚಟುವಟಿಕೆಗಳ ಮೂಲಕ ಸ್ವಯಂ-ಕಲಿಕೆಯನ್ನು ಉತ್ತೇಜಿಸಲಾಗುತ್ತದೆ.

**ಸಂವಾದಾತ್ಮಕ ಮತ್ತು ತೊಡಗಿಸಿಕೊಳ್ಳುವ ವಿಧಾನಗಳು:** ಕಲಿಕೆಯನ್ನು ಆನಂದದಾಯಕವಾಗಿಸಲು ಕಥೆ ಹೇಳುವಿಕೆ, ಆಟಗಳು, ಹಾಡುಗಳು ಹಾಗೂ ಗುಂಪು ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತದೆ.

**ಬಹು-ಹಂತದ ಬೋಧನಾ ವಿಧಾನ:** ವಯೋಮಾನ ಅಥವಾ ತರಗತಿಯನ್ನು ಆಧಾರವಾಗಿರಿಸದೆ, ಮಕ್ಕಳನ್ನು ಅವರ ಪ್ರಾವೀಣ್ಯತೆಯ ಆಧಾರದ ಮೇಲೆ ಗುಂಪು ಮಾಡುವ ಮೂಲಕ ವೈವಿಧ್ಯಮಯ ಕಲಿಕಾ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸಲಾಗುತ್ತದೆ.

**ನಿರಂತರ ಮೌಲ್ಯಮಾಪನ:** ಸರಳ ಮೌಲ್ಯಮಾಪನಗಳ ಮೂಲಕ ವಿದ್ಯಾರ್ಥಿಗಳ ಪ್ರಗತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ ಹಾಗೂ ಅದರ ಆಧಾರದ ಮೇಲೆ ಕಲಿಕೆಯ ತಂತ್ರಗಳನ್ನು ಅಗತ್ಯಕ್ಕೆ ಅನುಗುಣವಾಗಿ ಹೊಂದಿಸಲಾಗುತ್ತದೆ.

**ಶಿಕ್ಷಕರ ಸಬಲೀಕರಣ:** ತರಗತಿಗಳಲ್ಲಿ ABL ತಂತ್ರಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಶಿಕ್ಷಕರಿಗೆ ಅಗತ್ಯವಾದ ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸಲಾಗುತ್ತದೆ.

**ಪೋಷಕರ ಒಳಗೊಳ್ಳುವಿಕೆ:** ಮೂಲಭೂತ ಕೌಶಲ್ಯಗಳನ್ನು ಬಲಪಡಿಸಲು ಪೋಷಕರು ಮನೆಯಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲಾಗುತ್ತದೆ.

# ಕಾರ್ಯಕ್ರಮದ ವಿನ್ಯಾಸ








ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

2025-26 ನೇ ಸಾಲಿನ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಕೌಶಲಗಳ ಗುರಿಸಾಧನೆಗಾಗಿ
FLN ಜನವರಿ ತಿಂಗಳ ಚಟುವಟಿಕೆಗಳು - 2025
ತರಗತಿ 1 & 2 - (FLN ಕಲಿಕಾ ಫಲಗಳನ್ನುಆಧರಿಸಿ)

| | ವಿಷಯ - ಕನ್ನಡ | | FLN ಚಟುವಟಿಕೆಗಳು | ತರಗತಿ 1 & 2 |
|---|---|---|---|---|
| ಕ್ರ. ಸಂ | ದಿನಗಳು/ ವಾರಗಳು | ಕಲಿಕಾ ಫಲಗಳು | ಚಟುವಟಿಕೆಗಳು | ಕಲಿಕಾ ಸಾಮಗ್ರಿ |
| 1 | ದಿನ 1 | ಅಕ್ಷರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಶಬ್ಧಗಳನ್ನು ಗುರುತಿಸಿ,ಸರಳ ಪದ ರಚನೆ ಮಾಡುವರು | ಅಕ್ಷರಗಳನ್ನು ಗುರುತಿಸುವರು ಮತ್ತು ಪದಗಳನ್ನು ರಚಿಸುವರು. ಕೊಟ್ಟಿರುವ ಅಕ್ಷರಗಳನ್ನು ಬಳಸಿ ಪದಗಳನ್ನು ರಚಿಸುವುದು ಉದಾ : ಜ ವ ರ ಮ ಗ ಸ (ವರ, ಸರ, ಮಗ ಮರ) | ಅಕ್ಷರಗಳ ಕಾರ್ಡ್, ಮಿಂಚು ಪಟ್ಟಿ |
| 2 | ದಿನ 2 | ಅಕ್ಷರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಶಬ್ಧಗಳನ್ನು ಗುರುತಿಸಿ,ಸರಳ ಪದ ರಚನೆ ಮಾಡುವರು | ಮಕ್ಕಳು ವೃತ್ತಾಕಾರದಲ್ಲಿ ಕುಳಿತು ಮೊದಲು ಒಂದು ಅಕ್ಷರವನ್ನು ಜೋರಾಗಿ ಉಚ್ಚರಿಸುತ್ತಾರೆ (ಉದಾ: ಕ). ಮಕ್ಕಳು ಆ ಅಕ್ಷರದ ಶಬ್ಧವನ್ನು ಒಟ್ಟಿಗೆ ಪುನರಾವರ್ತಿಸುತ್ತಾರೆ. ನಂತರ ಶಿಕ್ಷಕರು ಕೇಳುತ್ತಾರೆ: "ಕ ಶಬ್ದದಿಂದ ಯಾವ ಪದ ಬರಬಹುದು?" ಮಕ್ಕಳು ಬಾಯಿಯಿಂದಲೇ | ಅಕ್ಷರಗಳ ಕಾರ್ಡ್, ಮಿಂಚು ಪಟ್ಟಿ, ಪದಗಳ ಕಾರ್ಡ್ |




### ಕಲಿಕಾ ಫಲ

- ಜಿಲ್ಲಾ ಮಟ್ಟದಲ್ಲಿ ಒಟ್ಟು 8 ಡಿ.ಆರ್.ಟಿ ಸಭೆಗಳನ್ನು ನಡೆಸಲಾಯಿತು, ಇದರಲ್ಲಿ ಪ್ರಗತಿಯನ್ನು ಪರಿಶೀಲಿಸಲು, ಚಟುವಟಿಕೆಗಳನ್ನು ಯೋಜಿಸಲು ಮತ್ತು FLN ಕಾರ್ಯಕ್ರಮದ ಅನುಷ್ಠಾನಕ್ಕೆ ಬೆಂಬಲವನ್ನು ಬಲಪಡಿಸುವುದು ಸಭೆಯ ಪ್ರಮುಖ ಉದ್ದೇಶವಾಗಿತ್ತು.
- 5 ಬ್ಲಾಕ್‌ಗಳಲ್ಲಿ ಬ್ಲಾಕ್ ಮಟ್ಟದಲ್ಲಿ 3 BRT ಸಭೆಗಳು ಯಶಸ್ವಿಯಾಗಿ ನಡೆಸಲ್ಪಟ್ಟಿದ್ದು, ಶಾಲಾ ಮಟ್ಟದಲ್ಲಿ ಪರಿಣಾಮಕಾರಿ ಸಮನ್ವಯ ಹಾಗೂ ಕ್ರಮಬದ್ಧ ಅನುಸರಣೆಯನ್ನು ಖಚಿತಪಡಿಸಲಾಯಿತು.
- 17 ಡಿ.ಆರ್.ಟಿ ಸದಸ್ಯರು ಜಿಲ್ಲಾ ಮಟ್ಟದ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು, FLN ಕಾರ್ಯಕ್ರಮದ ಚಟುವಟಿಕೆಗಳ ಯೋಜನೆ, ರಚನೆ ಮತ್ತು ಮೇಲ್ವಿಚಾರಣೆಗೆ ಕೊಡುಗೆ ನೀಡಿದರು.
- ಬ್ಲಾಕ್ ಮಟ್ಟದ BRT ಸಭೆಗಳಲ್ಲಿ 20 ಸದಸ್ಯರು ಸಕ್ರಿಯವಾಗಿ ಭಾಗವಹಿಸಿ, ಶಾಲೆಗಳಿಗೆ FLN ಸಂಪನ್ಮೂಲಗಳ ರಚನೆ ಹಾಗೂ ಪರಿಣಾಮಕಾರಿ ಪ್ರಸರಣಕ್ಕೆ ಬೆಂಬಲ ನೀಡಿದರು.

**ಫಲಿತಾಂಶ:**

- 9 ಬ್ಲಾಕ್‌ಗಳಲ್ಲಿ FLN ಅನುಷ್ಠಾನವನ್ನು ಬೆಂಬಲಿಸಲು 20 ಸದಸ್ಯರ ಬ್ಲಾಕ್ ಸಂಪನ್ಮೂಲ ತಂಡ (BRT) ರಚಿಸಲಾಗಿದೆ.
- 847 ಶಾಲೆಗಳು FLN ಆರಂಭಿಕ ಮತ್ತು ಅಂತಿಮ ಮೌಲ್ಯಮಾಪನವನ್ನು ನಡೆಸಿ ಫಲಿತಾಂಶಗಳನ್ನು ದಾಖಲಿಸಿವೆ.
- ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದ ಕಲಿಕೆಯನ್ನು ಬಲಪಡಿಸಲು ಮಾಸಿಕ ತರಗತಿ ಚಟುವಟಿಕೆಗಳನ್ನು ಒಳಗೊಂಡಂತೆ 7 ತಿಂಗಳ FLN ಚಟುವಟಿಕೆಗಳನ್ನು ವಿನ್ಯಾಸಗೊಳಿಸಿ ಕಾರ್ಯಗತಗೊಳಿಸಲಾಗಿದೆ.
- **23.96%** FLN ಸುಧಾರಣೆಯನ್ನು ಗಮನಿಸಲಾಗಿದೆ. (ಜನವರಿ ತಿಂಗಳ ಮೌಲ್ಯಮಾಪನದ ಆಧಾರದ ಮೇಲೆ).




- FLN ಕಾರ್ಯಕ್ರಮದಲ್ಲಿ ಒಟ್ಟು ವಿದ್ಯಾರ್ಥಿಗಳ ದಾಖಲಾತಿ: 133,181
- 100% ಶಾಲೆಗಳು FLN ಕಾರ್ಯಕ್ರಮಗಳನ್ನು ಅಳವಡಿಸಿದ್ದಾರೆ.

## ಪ್ರಮುಖ ಮುಖ್ಯಾಂಶಗಳು

- ಜಿಲ್ಲಾ ಸಂಪನ್ಮೂಲ ತಂಡ (DRT)ವು FLN ಆರಂಭಿಕ ಮೌಲ್ಯಮಾಪನವನ್ನು ಅಂತಿಮಗೊಳಿಸಿ, ಅದನ್ನು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಯಶಸ್ವಿಯಾಗಿ ನಡೆಸಲಾಯಿತು.
- ಬ್ಲಾಕ್ ಮಟ್ಟದಲ್ಲಿ FLN ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಬೆಂಬಲಿಸಲು ಬ್ಲಾಕ್ ಸಂಪನ್ಮೂಲ ತಂಡಗಳನ್ನು (BRTಗಳು) ರಚಿಸಿ ಯಶಸ್ವಿಯಾಗಿ ಬಳಸಿಕೊಳ್ಳಲಾಯಿತು.
- ಶಾಲಾ ನಾಯಕರಿಗೆ ಆನ್‌ಲೈನ್ ಸಭೆ ಮತ್ತು YouTube ಲೈವ್ ಅಧಿವೇಶನದ ಮೂಲಕ ಆರಂಭಿಕ ಮೌಲ್ಯಮಾಪನ ಸಾಧನದ ಬಗ್ಗೆ ತಿಳಿಸಲಾಯಿತು.
- ಬೆಂಗಳೂರು ನಗರ ಜಿಲ್ಲೆಯ ಶಾಲೆಗಳು FLN ಮಾಸಾಚರಣೆ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸಿದ್ದು, ಚಟುವಟಿಕೆ ಆಧಾರಿತ ಕಲಿಕೆಯನ್ನು ಬಳಸಿಕೊಂಡು ಸಕ್ರಿಯವಾಗಿ FLN ತರಗತಿಗಳನ್ನು ನಡೆಸಲಾಯಿತು.
- ಆಗಸ್ಟ್ ತಿಂಗಳ FLN ಚಟುವಟಿಕೆಗಳು ಮತ್ತು ದಸರಾ ಚಟುವಟಿಕೆಗಳನ್ನು DRT ಮತ್ತು BRT ಸದಸ್ಯರು ಸಹಯೋಗದೊಂದಿಗೆ ವಿನ್ಯಾಸಗೊಳಿಸಿ ನಂತರ DIET ಅಧಿಕಾರಿಗಳಿಂದ ಪರಿಶೀಲನೆ ಮಾಡಿಸಿ ಶಾಲೆಗಳಲ್ಲಿ ಯಶಸ್ವಿಯಾಗಿ ಕಾರ್ಯಗತಗೊಳಿಸಲಾಯಿತು.
- ಶಾಲೆಗಳು WhatsApp ಗುಂಪುಗಳ ಮೂಲಕ ದಸರಾ ಚಟುವಟಿಕೆಗಳನ್ನು ಹಂಚಿಕೊಳ್ಳುವ ಮೂಲಕ ತರಗತಿಯ ಹೊರಗೆ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಲಾಯಿತು.
- DRT ಸದಸ್ಯರಿಂದ 200+ ಚಟುವಟಿಕೆಗಳನ್ನು ರಚನೆ ಮಾಡಿಸಲಾಯಿತು.



# ಪೋಷಕರ ಸಬಲೀಕರಣ ಉಪಕ್ರಮ



*2025-26 ಸಾಲಿನ ಶೈಕ್ಷಣಿಕ ಮಾರ್ಗದರ್ಶಿಯಂತೆ 4 ಪೋಷಕರ ಸಭೆ ಹಾಗೂ 2 ಸಮುದಾಯದತ್ತ ಶಾಲೆ ಕಾರ್ಯಕ್ರಮಗಳನ್ನು ನಡೆಸಲು ಆದೇಶ ಹೋರಾಡಿಸಲಾಗಿದ್ದು ಹಾಗೂ ಶಿಕ್ಷಣ ಇಲಾಖೆಯ ಆದೇಶದಂತೆ ಈ ಬಾರಿ 4 ಪೋಷಕರ ಸಭೆ ಮತ್ತು 2 ಸಮೂದಾಯದತ್ತ ಶಾಲೆಗಳನ್ನು ಹಮ್ಮಿಕೊಳ್ಳಲಾಗಿದೆ.*
*ಪ್ರತಿ ಪೋಷಕರ ಸಭೆಗೂ ಪ್ರತ್ಯೇಕವಾದ ಆಜೆಂಡಾವನ್ನು ಮತ್ತು ಹಸ್ತಪ್ರತಿಯನ್ನು 2 ಜಿಲ್ಲೆಯ ಡಯಟ್ ಗಳ ಮೂಲಕ ಶಾಲೆಗಳಿಗೆ ನೀಡಲಾಗಿದೆ, ಅದಕ್ಕನುಗುಣವಾಗಿ ಶಾಲೆಯಲ್ಲಿ ಪೋಷಕರ ಸಭೆಯನ್ನು ಯಶಸ್ವಿಯಾಗಿ ನಡೆಸಿದರು.*
*ಉದಾಹರಣೆ: ಮನೆಯಲ್ಲಿ ಕಲಿಕಾ ವಾತಾವರಣ ನಿರ್ಮಾಣ, ಪರೀಕ್ಷಾ ಸಿದ್ಧತೆ, ಮಕ್ಕಳ ಯೋಗಕ್ಷೇಮ ಮುಂತಾದವು.*

ಮಗುವಿನ ಕಲಿಕೆಯು ಮನೆಯಿಂದಲೇ ಪ್ರಾರಂಭವಾಗುತ್ತದೆ, ಪೋಷಕರು ಮಕ್ಕಳ ಕಲಿಕೆಗೆ ಬೆಂಬಲ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಆದಾಗ್ಯೂ, ಅನೇಕ ಪೋಷಕರು ತಮ್ಮ ಮಗುವಿನ ಶಿಕ್ಷಣಕ್ಕಾಗಿ ಸಮಯ ಮತ್ತು ಸಂಪನ್ಮೂಲಗಳನ್ನು ನೀಡುವಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಪೋಷಕರ ಸಬಲೀಕರಣ ಉಪಕ್ರಮವು ಪೋಷಕರನ್ನು ತಮ್ಮ ಮಗುವಿನ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿದೆ.

## ಉದ್ದೇಶಗಳು

- ಪೋಷಕರು ಶಾಲಾ ಗುಂಪುಗಳಲ್ಲಿ ಮಕ್ಕಳ ಚಟುವಟಿಕೆಗಳನ್ನು ಹಂಚಿಕೊಳ್ಳುವ ಮೂಲಕ ಮನೆ-ಶಾಲಾ ಸಂಪರ್ಕವನ್ನು ಬಲಪಡಿಸುವ ಮತ್ತು  ವಿದ್ಯಾರ್ಥಿಗಳ ಕಲಿಕೆಯನ್ನು ಬೆಂಬಲಿಸುವ ಮೂಲಕ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.
- ಪೋಷಕರು ಮತ್ತು SDMC ಸದಸ್ಯರು ಮನೆಯಲ್ಲಿ ಓದುವ ಮೂಲೆಗಳನ್ನು ಸಿದ್ಧಪಡಿಸುವುದು ಮತ್ತು ಮಕ್ಕಳ ಚಟುವಟಿಕೆ ನವೀಕರಣಗಳನ್ನು ಶಿಕ್ಷಕರೊಂದಿಗೆ ಸಕ್ರಿಯವಾಗಿ ಹಂಚಿಕೊಳ್ಳುವುದರ ಮೂಲಕ ಮಕ್ಕಳಿಗೆ  ಮನೆಯಲ್ಲಿ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು.
- ಶಿಕ್ಷಕರು ನಿಯಮಿತವಾಗಿ ಪೋಷಕರ ಗುಂಪುಗಳ ಮೂಲಕ ಪೋಷಕರೊಂದಿಗೆ ಕ್ಯಾಲೆಂಡರ್ ನಲ್ಲಿರುವ ಚಟುವಟಿಕೆಗಳು ಮತ್ತು ದಸರಾ ಚಟುವಟಿಕೆಗಳನ್ನು ಹಂಚಿಕೊಳ್ಳುವುದರ ಮೂಲಕ  ಮಕ್ಕಳ ದೈನಂದಿನ ಕಲಿಕೆಯಲ್ಲಿ ಹೆಚ್ಚಿನ ಪೋಷಕರ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು.



## ಫಲಿತಾಂಶ

- DIET ವತಿಯಿಂದ ಶಾಲೆಗಳಿಗೆ PTM ಕಾರ್ಯಸೂಚಿ, ಸೂಚಿತ ಅಧಿವೇಶನ ಯೋಜನೆ ಹಾಗೂ ಸಂಬಂಧಿತ ಸಂಪನ್ಮೂಲಗಳೊಂದಿಗೆ ಸುತ್ತೋಲೆಯನ್ನು ಬಿಡುಗಡೆ ಮಾಡಿಸಲಾಯಿತು.
- 740 ಶಾಲೆಗಳಲ್ಲಿ (CRP ವೀಕ್ಷಣೆಯ ಪ್ರಕಾರ) 4 PTM ಗಳನ್ನು ನಡೆಸಲಾಯಿತು. (ಜುಲೈ 26, 31 ಅಕ್ಟೋಬರ್, 30 ಜನವರಿ, 7 ಮಾರ್ಚ್ 2026)
- ಒಟ್ಟು 27.76% ಪೋಷಕರು ಈ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. (ತಂಡ ವೀಕ್ಷಣೆಯ ಪ್ರಕಾರ)
- 1117 PTM ವೀಕ್ಷಣೆಯನ್ನು ಕ್ಲಸ್ಟರ್ ಮತ್ತು ಬ್ಲಾಕ್ ಹಂತದ ಅಧಿಕಾರಿಗಳು ಭರ್ತಿ ಮಾಡಿರುತ್ತಾರೆ.
- ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಒಂದೇ ದಿನ ಪೋಷಕರ ಸಭೆಗಳನ್ನು ನಡೆಸಲಾಯಿತು.
- SDMC ಸದಸ್ಯರು ಮನೆಯಲ್ಲಿ ಕಲಿಕಾ ಸ್ಥಳವನ್ನು ರಚಿಸುವ ಬಗ್ಗೆ ಪೋಷಕರಿಗೆ ಮಾರ್ಗದರ್ಶನ ನೀಡಿದರು ಮತ್ತು ಇತರ ಪೋಷಕರನ್ನು ಪ್ರೇರೇಪಿಸಿದರು.
- ಪೋಷಕರನ್ನು ವಿಶೇಷವಾಗಿ ಸ್ವಾಗತಿಸಲಾಯಿತು ಮತ್ತು ಅವರ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆ ನೀಡಲಾಯಿತು.
- ಪೋಷಕರ ಕ್ಯಾಲೆಂಡರ್ ಚಟುವಟಿಕೆಗಳ ಬಗ್ಗೆ ಪೋಷಕರಿಗೆ ವಿವರಣೆ ನೀಡಲಾಯಿತು.
- 815 ಪೋಷಕರು ವಿದ್ಯಾರ್ಥಿಗಳೊಂದಿಗೆ ಮನೆಯಲ್ಲಿಯೇ ಚಟುವಟಿಕೆಗಳನ್ನು ಮಾಡಿದ್ದಾರೆ.
- 1807 ಪೋಷಕರು ತಮ್ಮ ಮನೆಗಳಲ್ಲಿ ಕಲಿಕಾ ಪರಿಸರವನ್ನು ರಚಿಸಿದ್ದಾರೆ.

## ಮುಖ್ಯಾಂಶಗಳು

- ಶಿಕ್ಷಕರು ನಿಯಮಿತವಾಗಿ ಕ್ಯಾಲೆಂಡರ್‌ಗಳು ಮತ್ತು ರಜಾ ಚಟುವಟಿಕೆಗಳನ್ನು ಪೋಷಕರ ಗುಂಪುಗಳ ಮೂಲಕ ಪೋಷಕರೊಂದಿಗೆ ಹಂಚಿಕೊಂಡಿದ್ದಾರೆ, ಇದು ಮಕ್ಕಳ ದೈನಂದಿನ ಕಲಿಕೆಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆಗೆ ಕಾರಣವಾಗಿದೆ.
- ಪಾಲಕರು ಮತ್ತು SDMC ಸದಸ್ಯರು ಮನೆಯಲ್ಲಿ ಓದುವ ಮೂಲೆಗಳನ್ನು ರಚಿಸಿದ್ದಾರೆ ಮತ್ತು ಮಕ್ಕಳ ಕಲಿಕಾ ಚಟುವಟಿಕೆಗಳ ಕುರಿತು ಶಿಕ್ಷಕರೊಂದಿಗೆ ಸಕ್ರಿಯವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ ಹಾಗೂ ಇದು ಮನೆಗಳಲ್ಲಿ ಕಲಿಕಾ ವಾತಾವರಣವನ್ನು ನಿರ್ಮಿಸುವಲ್ಲಿ ಬೇರೆ ಪೋಷಕರಿಗೆ ಪ್ರೋತ್ಸಾಹಕವಾಗಿದೆ.
- ಪೋಷಕರು ಮತ್ತು SDMC ಸದಸ್ಯರು ಮಕ್ಕಳ ಚಟುವಟಿಕೆಗಳನ್ನು ಹಂಚಿಕೊಳ್ಳುವ ಮೂಲಕ, ಮನೆ ಮತ್ತು ಶಾಲೆಯ ನಡುವಿನ ಸಹಯೋಗವನ್ನು ಬಲಪಡಿಸಲು ಶಾಲಾ ಗುಂಪುಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.





# ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಉಪಕ್ರಮ




ಮಕ್ಕಳ ಕಲಿಕಾ ಪ್ರಕ್ರಿಯೆಯು ಪ್ರತಿ ಹಂತದಲ್ಲೂ ನಡೆಯುತ್ತದೆ ಶಾಲೆ, ತರಗತಿ, ಮನೆ ಹಾಗೂ ಸಮುದಾಯ ಅದರಲ್ಲಿ ಮುಖ್ಯವಾಗಿ ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯಲ್ಲಿ ಮಕ್ಕಳಿಗೆ ಕಲಿಯುವ ಅವಕಾಶವಿದೆ. ಮಕ್ಕಳಿಗೆ ತಮ್ಮ ಅನುಭವ ಹಾಗೂ ಪ್ರತಿಭೆಯನ್ನು ಪ್ರದರ್ಶನ ಮಾಡಲು ಶಾಲೆಯಲ್ಲಿ ನಡೆಯುವ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಆ ದಿನಕ್ಕೆ ಸಕಾರಾತ್ಮಕ ಆರಂಭವನ್ನು ಒದಗಿಸುತ್ತದೆ, ವಿದ್ಯಾರ್ಥಿಗಳನ್ನು ತರಗತಿಗೆ ಸಿದ್ಧಪಡಿಸುತ್ತದೆ. ಬೆಳಗಿನ ಪ್ರಾರ್ಥನಾ ಅವಧಿಯ ಕಾರ್ಯಕ್ರಮದ ಮುಖ್ಯ ಗುರಿ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದು, ನಾಯಕತ್ವ ಮತ್ತು ಆತ್ಮವಿಶ್ವಾಸದ ಕೌಶಲ್ಯಗಳನ್ನು ಬೆಳೆಸಲು ಒಂದು ವೇದಿಕೆಯನ್ನು ಒದಗಿಸುವುದಾಗಿದೆ.

**ಉದ್ದೇಶಗಳು:**

- ಮಕ್ಕಳಿಗೆ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ವೇದಿಕೆಯನ್ನು ಒದಗಿಸಿ, ಅವರನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಿಕೆ, ಒಳಗೊಳ್ಳುವಿಕೆ ಮತ್ತು ನಾಯಕತ್ವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದು.
- ಮಕ್ಕಳ ದೈಹಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಸೇರಿಸುವ ಮೂಲಕ ಅವರ ಸಮಗ್ರ ಬೆಳವಣಿಗೆಗೆ ಅವಕಾಶಗಳನ್ನು ಸೃಷ್ಟಿಸುವುದು.
- ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ತಮ್ಮನ್ನು ತಾವು ವ್ಯಕ್ತಪಡಿಸಲು ಮತ್ತು ವೇದಿಕೆಯಲ್ಲಿ ಮಾತನಾಡಲು ಪ್ರೋತ್ಸಾಹಿಸುವಂತೆ ಮಾಡುವುದು.
- ಸಕಾರಾತ್ಮಕವಾಗಿ ಮತ್ತು ಸಹಯೋಗದಿಂದ ಪ್ರಾರಂಭಿಸಲು ಮತ್ತು ಉತ್ತಮವಾಗಿ ದಿನವನ್ನು ಆರಂಭ ಮಾಡಲು ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತವೆ.

# ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಪರಿಣಾಮ



## ತೊಡಗಿಸಿಕೊಳ್ಳುವಿಕೆ

ವಿದ್ಯಾರ್ಥಿಗಳು ಪ್ರತಿ ತಿಂಗಳು ಬರುವ ವಿಷಯ ವಸ್ತುವಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಉದಾಹರಣೆ ಸಮುದಾಯದ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ವೈದ್ಯರು ಮತ್ತು ಪೊಲೀಸರ ಕುರಿತು ಚಟುವಟಿಕೆಗಳನ್ನು ಪ್ರದರ್ಶನ ಮಾಡಿದ್ದಾರೆ.

## ಸಂತೋಷದಾಯಕ ಕಲಿಕೆ

ಶಿಕ್ಷಕ ಮತ್ತು ಶಾಲೆ, ಮೋಜಿನ ಗಣಿತ, ಹಣ್ಣುಗಳು ಮತ್ತು ತರಕಾರಿಗಳು, ದಿನಕ್ಕೊಂದು ಕಥೆ ಮತ್ತು ವಿಜ್ಞಾನ ಮ್ಯಾಜಿಕ್‌ನಂತಹ ವಿಷಯಾಧಾರಿತ ಪ್ರಾರ್ಥನಾ ಅವಧಿಗಳು ಸಂತೋಷದಾಯಕ ಮತ್ತು ಅರ್ಥಪೂರ್ಣ ಕಲಿಕೆಯನ್ನು ಮಕ್ಕಳಲ್ಲಿ ಉತ್ತೇಜಿಸಿವೆ.





## ಉತ್ತೇಜನ

ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಐದು ಬ್ಲಾಕ್ ನ ಶೈಕ್ಷಣಿಕ ನಾಯಕರು (BRP/BRC) ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳ ಪ್ರಗತಿ ಮತ್ತು ದತ್ತಾಂಶವನ್ನು ಪ್ರಸ್ತುತಪಡಿಸಿದರು, ಜೊತೆಗೆ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಕಾರ್ಯಕ್ರಮದ ಪ್ರಗತಿಯ ದತ್ತಾಂಶಗಳನ್ನು ವಿವರಿಸಿದರು.

## ಸೃಜನಾತ್ಮಕತೆಗೆ ಅವಕಾಶ

ಜುಲೈ ತಿಂಗಳಿನಲ್ಲಿ ವಿನೂತನವಾಗಿ ಮಾಡಲಾದ ಸಾಂಸ್ಕೃತಿಕ ಚಟುವಟಿಕೆಗಳು - ಜಾನಪದ ನೃತ್ಯ ಮತ್ತು ಮಿಮಿಕ್ರಿ - ವಿದ್ಯಾರ್ಥಿಗಳಿಗೆ ಸೃಜನಶೀಲತೆಯನ್ನು ಪ್ರಸ್ತುತಪಡಿಸಲು ಅವಕಾಶ ನೀಡಿತು.





## ಶಾಲಾ ಭೇಟಿ

ನಿಗದಿಪಡಿಸಿದ ಶಾಲಾ ಭೇಟಿಗಳು, CRP ರವರ ಶಾಲಾ ಭೇಟಿಗಳು ಹಾಗೂ ನಿಯಮಿತ WhatsApp ನವೀಕರಣಗಳ ಮೂಲಕ ಪರಿಣಾಮ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಪರಿಣಾಮಕಾರಿಯಾಗಿ ಗಮನಿಸಲಾಯಿತು.

## ಕಲಿಕಾ ಫಲಗಳು

- ಮಂತ್ರ ತಂಡದ ಶಾಲಾ ಭೇಟಿಗಳ ಆಧಾರದ ಮೇಲೆ, ಒಟ್ಟು 4,866 ವಿದ್ಯಾರ್ಥಿಗಳು ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನಾ ಅವಧಿ (MA) ಚಟುವಟಿಕೆಗಳನ್ನು ಸಕ್ರಿಯವಾಗಿ ಮುನ್ನಡೆಸಿದರು.
- 784 ಶಿಕ್ಷಕರು ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳನ್ನು ನಡೆಸುವಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು ಮತ್ತು ಬೆಂಬಲಿಸಿದರು.
- 90.30% ಶಾಲೆಗಳು ತಮ್ಮ ದೈನಂದಿನ ದಿನಚರಿಯ ಭಾಗವಾಗಿ ನಿಯಮಿತವಾಗಿ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳನ್ನು ಮುನ್ನೆಡೆಸಿದವು, ಶಾಲಾ ಅಭಿವೃದ್ಧಿ ಉಪಕ್ರಮಗಳ ಸ್ಥಿರ ಅನುಷ್ಠಾನವನ್ನು ಪ್ರದರ್ಶಿಸಿದವು.

## ಪ್ರಮುಖ ಮುಖ್ಯಾಂಶಗಳು

- ವಿದ್ಯಾರ್ಥಿಗಳು ಮಾಸಿಕ ವಿಷಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಉದಾಹರಣೆಗೆ: ರಸ್ತೆ ಸುರಕ್ಷತೆ ಮತ್ತು ಸ್ಥಳೀಯ ಸರ್ಕಾರಿ ಸೇವೆಗಳ ಚಟುವಟಿಕೆಗಳು ಸಮುದಾಯದಲ್ಲಿ ಅವರ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಿದವು.
- ಸಂಕ್ರಾತಿ ಮತ್ತು ಸುಗ್ಗಿ ಆಚರಣೆ, ವಿಜ್ಞಾನ ದಿನ, ಔಷಧೀಯ ಸಸ್ಯಗಳ ಪರಿಚಯ, ಹಣ್ಣುಗಳು ಮತ್ತು ತರಕಾರಿಗಳು, ಸಹಾಯ, ಸಹಕಾರ ಮತ್ತು ವಿಜ್ಞಾನ ವಿಷಯಾಧಾರಿತ ಅಸೆಂಬ್ಲಿಗಳು ಸಂತೋಷದಾಯಕ ಮತ್ತು ಅರ್ಥಪೂರ್ಣ ಕಲಿಕೆಯ ಅನುಭವಗಳನ್ನು ಉತ್ತೇಜಿಸಿದವು.
- ಜುಲೈನಲ್ಲಿ ಪ್ರಮುಖವಾಗಿ  ಮಾಡಲಾದ ಜಾನಪದ ನೃತ್ಯ, ರಸಪ್ರಶ್ನೆ ಮತ್ತು ಮಿಮಿಕ್ರಿ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೃಜನಾತ್ಮಕವಾಗಿ ಸಿದ್ಧಪಡಿಸಿ ಪ್ರದರ್ಶಿಸಿದರು.
- ಶಾಲಾ ಭೇಟಿಗಳು ಮತ್ತು ನಿಯಮಿತ ವಾಟ್ಸಾಪ್ ನವೀಕರಣಗಳ ಮೂಲಕ ಪರಿಣಾಮ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಅನುಪಾಲನೆ ಮಾಡಲಾಯಿತು.
- ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಐದು ಬ್ಲಾಕ್ ಗಳ ಶೈಕ್ಷಣಿಕ ನಾಯಕರು (BRP/BRC) ಬೆಳಗಿನ ಪ್ರಾರ್ಥನಾ ಸಭೆಯ ಪ್ರಗತಿ ಮತ್ತು ದತ್ತಾಂಶವನ್ನು ಪ್ರಸ್ತುತಪಡಿಸಿದರು, ಇದು ಕಾರ್ಯಕ್ರಮದ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಬಲವರ್ಧನೆಗೆ ಕೊಡುಗೆ ನೀಡಿತು.





# DIET ಅಧಿಕಾರಿಗಳೊಂದಿಗೆ  ಪೂರ್ವ ಯೋಜನಾ ಸಭೆ

ಶೈಕ್ಷಣಿಕ ವರ್ಷದ ಆರಂಭದಲ್ಲಿ, ನಾವು ಬೆಂಗಳೂರಿನ ಉತ್ತರ ಮತ್ತು ನಗರ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (DIET) ಅಧಿಕಾರಿಗಳೊಂದಿಗೆ ಸಮಗ್ರ ಯೋಜನಾ ಸಭೆಯನ್ನು ಆಯೋಜಿಸಲಾಗಿದೆ, ಯೋಜನಾ ಸಭೆಯಲ್ಲಿ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಹಯೋಗದ ಅಧಿವೇಶನವು ಹಿಂದಿನ ವರ್ಷದ ಕಾರ್ಯಕ್ರಮದ ಪುನರ್ ಅವಲೋಕನ ಹಾಗೂ ಪ್ರಸ್ತುತ ಶೈಕ್ಷಣಿಕ ಅಗತ್ಯತೆಗಳನ್ನು ನಿರ್ಣಯಿಸಲು ಹಾಗೂ ನಮ್ಮ ಪ್ರಭಾವ ತಂತ್ರಗಳು ಮತ್ತು  2025-26 ವಾರ್ಷಿಕ ಕಾರ್ಯ ಯೋಜನೆಗೆ ನವೀಕರಣಗಳನ್ನು ಚರ್ಚಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿದೆ. DIET ಉಪನ್ಯಾಸಕರ ಸಕ್ರಿಯ ಭಾಗವಹಿಸುವಿಕೆಯಿಂದ ನಮ್ಮ ಯೋಜನೆಗಳು ಸಂದರ್ಭೋಚಿತವಾಗಿ ಪ್ರಸ್ತುತವಾಗಿವೆ ಮತ್ತು ಜಿಲ್ಲಾ ನಿರ್ದಿಷ್ಟ ಅವಶ್ಯಕತೆಗಳೊಂದಿಗೆ ಹೊಂದಿಕೆಯಾಗುತ್ತವೆ ಎಂದು ಖಚಿತಪಡಿಸಿಕೊಳ್ಳಲಾಯಿತು. ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಮತ್ತು ಶೈಕ್ಷಣಿಕ ಉಪಕ್ರಮಗಳ ಪರಿಣಾಮಕಾರಿ ಅನುಷ್ಠಾನವನ್ನು ಉತ್ತೇಜಿಸುತ್ತದೆ.

## ಉದ್ದೇಶಗಳು

- 2024-2025 ನೇ ಸಾಲಿನ ಕಾರ್ಯಕ್ರಮದ ಪರಿಣಾಮ ಮತ್ತು ಪ್ರಮುಖ ಫಲಿತಾಂಶಗಳನ್ನು ಪ್ರಸ್ತುತಪಡಿಸುವುದು.
- 2025-2026 ನೇ ಸಾಲಿನ ಉಪಕ್ರಮಗಳು ಮತ್ತು ಯೋಜನೆಗಳನ್ನು ಪ್ರಸ್ತತಪಡಿಸುವುದು.
- ವಾರ್ಷಿಕ ಯೋಜನೆಯ ಸ್ಪಷ್ಟತೆ ಮತ್ತು ಸಂಕ್ಷಿಪ್ತತೆಗಾಗಿ DIET ಅಧಿಕಾರಿಗಳಿಂದ ಪ್ರತಿಕ್ರಿಯೆಯನ್ನು ಪಡೆಯುವುದು.
- 2025-2026 ನೇ ಸಾಲಿನಲ್ಲಿ ಚಟುವಟಿಕೆಗಳ ಅನುಷ್ಠಾನಕ್ಕಾಗಿ DIET ನ ಸಹಯೋಗ  ಮತ್ತು ಬೆಂಬಲವನ್ನು ಖಚಿತಪಡಿಸಿಕೊಳ್ಳುವುದು.

## ಕಲಿಕಾ ಫಲ

- ಯೋಜನಾ ಸಭೆಯಲ್ಲಿ DIET ನ 8 ಅಧಿಕಾರಿಗಳು ಭಾಗವಹಿಸಿದ್ದರು.
- DIET ಕಡೆಯಿಂದ 3 ಶಾಲಾಭಿವೃದ್ಧಿ ಉಪಕ್ರಮಗಳನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನ ಮಾಡಲು  ಅನುಮತಿ ನೀಡಲಾಯಿತು.
- DIET ನಿಂದ ಮುಖ್ಯಶಿಕ್ಷಕರಿಗೆ ಕಾರ್ಯಾಗಾರದ ಸುತ್ತೋಲೆಯನ್ನು ಹೊರಡಿಸಲಾಯಿತು.






# ಬ್ಲಾಕ್ ಹಂತದ ಶಾಲಾ ನಾಯಕರ ಕಾರ್ಯಾಗಾರ

ವಿದ್ಯಾದೀಪ ಕಾರ್ಯಕ್ರಮವು ಒಂದು ನಾಯಕತ್ವ ಅಭಿವೃದ್ಧಿ ಉಪಕ್ರಮವಾಗಿದ್ದು, ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯ ಶಾಲಾ ನಾಯಕರು ತಮ್ಮ ಶಾಲೆಗಳಲ್ಲಿ ಅರ್ಥಪೂರ್ಣ ಬದಲಾವಣೆಯನ್ನು ತರಲು ಸಹಾಯ ಮಾಡುತ್ತದೆ. ಈ ಕಾರ್ಯಾಗಾರದ ಮೂಲಕ, ಪರಿಣಾಮಕಾರಿ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ, ಪೋಷಕರ ತೊಡಗಿಸಿಕೊಳ್ಳುವಿಕೆಯಂತಹ ಪ್ರಮುಖ ಕ್ಷೇತ್ರಗಳನ್ನು ಬಲಪಡಿಸುವಲ್ಲಿ ನಾಯಕರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಇದು ಈ ವರ್ಷ ಪರಿಚಯಿಸಲಾದ ಹೊಸ ಬದಲಾವಣೆಗಳ ಕುರಿತು ನವೀಕರಣಗಳನ್ನು ಸಹ ಒದಗಿಸುತ್ತದೆ. ಈ ಕಾರ್ಯಕ್ರಮವು ನಾಯಕತ್ವ ಕೌಶಲ್ಯಗಳನ್ನು ನಿರ್ಮಿಸಲು ಸ್ಪಷ್ಟವಾದ ರಚನೆಯನ್ನು ನೀಡುತ್ತದೆ ಮತ್ತು ಶಾಲಾ ಸುಧಾರಣಾ ಪ್ರಕ್ರಿಯೆಯಲ್ಲಿ ಎಲ್ಲಾ ಭಾಗೀದಾರರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುತ್ತದೆ.

## ಉದ್ದೇಶಗಳು

- ವಿದ್ಯಾದೀಪ ಕಾರ್ಯಕ್ರಮದಡಿಯಲ್ಲಿ ಶಾಲಾ ಉಪಕ್ರಮಗಳ ಬಗ್ಗೆ ಪ್ರಸ್ತುತ ಪಡಿಸುವುದು.
- ಮುಖ್ಯಶಿಕ್ಷಕರ (HM) ಪಾತ್ರ ಮತ್ತು ಶಾಲಾ ಸುಧಾರಣೆಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡುವುದು.
- ದತ್ತಾಂಶ ನಮೂದು ಮತ್ತು ಅದಕ್ಕೆ ಸಂಬಂಧಿಸಿದ ಸವಾಲುಗಳನ್ನು ಪರಿಹರಿಸುವಲ್ಲಿ ಪ್ರಾಯೋಗಿಕ ಅನುಭವದ ಬಗ್ಗೆ ತಿಳಿಸುವುದು.
- ದತ್ತಾಂಶ ನಮೂದಿತ ಆವರ್ತನ ಮತ್ತು ಪ್ರಾಮುಖ್ಯತೆಯ ಬಗ್ಗೆ ಅರ್ಥ ಮಾಡಿಕೊಳ್ಳುವುದು..



**ಬೆಂಗಳೂರು ನಗರ**



**ಬೆಂಗಳೂರು ಉತ್ತರ**

## ಕಲಿಕಾ ಫಲ

- 96% ಶಾಲಾ ನಾಯಕರು ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.
- 1330 ಶಾಲೆಗಳಿಗೆ ಬೆಳಗಿನ ಪ್ರಾರ್ಥನಾ ಅವಧಿ (MA) ಕ್ಯಾಲೆಂಡರ್ ಮತ್ತು ಕೈಪಿಡಿಗಳನ್ನು ನೀಡಲಾಯಿತು.
- 9 ಬ್ಲಾಕ್‌ಗಳಲ್ಲಿ, 2 DIET ಗಳಿಂದ (ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಅಧಿಕಾರಿಗಳು) 20 ಅಧಿಕಾರಿಗಳು ಕಾರ್ಯಾಗಾರದ ಅವಧಿಗಳನ್ನು ಸುಗಮಗಾರಿಕೆ ಮಾಡಿ ನೆಡೆಸಿಕೊಟ್ಟರು, ಪರಿಣಾಮಕಾರಿ ಅನುಷ್ಠಾನ ಮತ್ತು ತೊಡಗಿಸಿಕೊಳ್ಳುವಿಕೆಗೆ ಒತ್ತು ನೀಡಿದರು.

# ಬ್ಲಾಕ್ ಹಂತದ ಶಾಲಾ ನಾಯಕರ  ಕಾರ್ಯಾಗಾರ

## ಫಲಿತಾಂಶ

- ಬೆಂಗಳೂರಿನ 9 ಬ್ಲಾಕ್‌ಗಳಲ್ಲಿ ಮುಖ್ಯಶಿಕ್ಷಕರ ಕಾರ್ಯಾಗಾರಗಳು ನಡೆದಿದ್ದು, 95.7% ಮುಖ್ಯಶಿಕ್ಷಕರು ಭಾಗವಹಿಸಿದ್ದಾರೆ.
- ಮುಖ್ಯಶಿಕ್ಷಕರು ಶಿಕ್ಷಕರಿಗೆ ವಿದ್ಯಾದೀಪ ಕಾರ್ಯಕ್ರಮದ ನವೀಕರಣಗಳು ಮತ್ತು ಕ್ಯಾಲೆಂಡರ್ ಬದಲಾವಣೆಗಳ ಕುರಿತು ಮಾಹಿತಿ ನೀಡಿದ್ದಾರೆ.
- ತರಗತಿ ಶಿಕ್ಷಕರು ತಮ್ಮ ತರಗತಿಯ ಪ್ರಾರ್ಥನಾ ಅವಧಿಯ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಮಾಡುತ್ತಿದ್ದು, ಮಕ್ಕಳನ್ನು ನಿಯಮಿತವಾಗಿ ಭಾಗವಹಿಸಲು ಪ್ರೋತ್ಸಾಹಿಸುತ್ತಿದ್ದಾರೆ.
- ಶಾಲೆಗಳು ಪೋಷಕರ ಸಭೆಗಳನ್ನು ನಡೆಸಿ, ಮನೆಗಳಲ್ಲಿ ಕಲಿಕಾ ವಾತಾವರಣ ನಿರ್ಮಿಸಲು ಪೋಷಕರನ್ನು ಪ್ರೇರೇಪಿಸಿವೆ.
- ಪೋಷಕರು ಮಕ್ಕಳ ಚಟುವಟಿಕೆಗಳನ್ನು ಪೂರ್ಣಗೊಳಿಸಿ, ಅವುಗಳನ್ನು ವಾಟ್ಸಾಪ್ ಗುಂಪುಗಳ ಮೂಲಕ ಹಂಚಿಕೊಂಡಿದ್ದಾರೆ.
- ಎಲ್ಲಾ ಶಾಲೆಗಳಲ್ಲಿ FLN ಪೂರ್ವಪರೀಕ್ಷೆಗಳು ನಡೆದಿದ್ದು, ಶಿಕ್ಷಕರು DIET ನಿಂದ ಕಳುಹಿಸಿದ ಮಾಸಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.



# ಶೈಕ್ಷಣಿಕ ನಾಯಕರಿಗೆ ನಾಯಕತ್ವ ಕಾರ್ಯಾಗಾರ

ಆಗಸ್ಟ್ 2025ರಿಂದ ಜನವರಿ 2026ರವರೆಗೆ ಬೆಂಗಳೂರು ನಗರ ಹಾಗೂ ಉತ್ತರ ಜಿಲ್ಲೆಗಳಲ್ಲಿ ಶೈಕ್ಷಣಿಕ ನಾಯಕರಿಗಾಗಿ ಈ ಶೈಕ್ಷಣಿಕ ವರ್ಷದಲ್ಲಿ 4 ಕಾರ್ಯಾಗಾರಗಳನ್ನು ನಡೆಸಲಾಯಿತು. ಈ ಕಾರ್ಯಾಗಾರಗಳಲ್ಲಿ ಅಧಿವೇಶನಗಳನ್ನು DIET ಮತ್ತು ಬ್ಲಾಕ್ ಮಟ್ಟದ ಅಧಿಕಾರಿಗಳು ಆಯೋಜಿಸಿ ಸುಗಮಗೊಳಿಸಿದರು, ಇದರಿಂದ ಕಾರ್ಯಕ್ರಮದ ಮೇಲಿನ ಅವರ ಬಲವಾದ ಮಾಲೀಕತ್ವ ಹಾಗೂ ಸಕ್ರಿಯ ಭಾಗವಹಿಸುವಿಕೆ ಸ್ಪಷ್ಟವಾಗಿ ಗೋಚರಿಸಿತು.

## ಉದ್ದೇಶಗಳು

- ಮೂರು ಶಾಲಾಭಿವೃದ್ಧಿ ಉಪಕ್ರಮಗಳ (Morning Assembly, Parent Empowerment, FLN) ಕುರಿತು ವಿಶ್ಲೇಷಿಸುವರು / ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವರು ಮತ್ತು ಪರಿಣಾಮ ಅನುಷ್ಠಾನಕ್ಕಾಗಿ ಸೂಕ್ತ ಬೆಂಬಲವನ್ನು ವ್ಯಕಪಡಿಸುವುದು.
- ಕ್ಲಸ್ಟರ್ ನಲ್ಲಿ ಆಗುವ ಉತ್ತಮ ಅಭ್ಯಾಸಗಳನ್ನು ಗುರುತಿಸಿ, ವಿಶ್ಲೇಷಿಸಿ ಹಾಗೂ ಅದನ್ನು ಇತರರೊಂದಿಗೆ ಹಂಚಿಕೊಳ್ಳುವುದು.
- ತರಗತಿ ಮೇಲ್ವಿಚಾರಣೆ ಮತ್ತು ಬೆಂಬಲ ವ್ಯವಸ್ಥೆಗಳ ಕುರಿತು ಸ್ಪಷ್ಟತೆ ನೀಡಿ, CRP/ಶಾಲಾ ನಾಯಕತ್ವದ ಪಾತ್ರವನ್ನು ಬಲಪಡಿಸುವುದು.
- ಪ್ರಗತಿ ಹೆಜ್ಜೆ ಕಾರ್ಯಕ್ರಮದ ಉದ್ದೇಶ, ಮಾನದಂಡಗಳು ಮತ್ತು ಶಾಲೆ ಆಯ್ಕೆ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು, ನ್ಯಾಯಸಮ್ಮತ ಮತ್ತು ಪಾರದರ್ಶಕ ಆಯ್ಕೆ ಖಚಿತಪಡಿಸುವುದು.

## ಕಲಿಕಾ ಫಲ

- ಕಾರ್ಯಾಗಾರದಲ್ಲಿ 80% CRP ಗಳು ಭಾಗವಹಿಸಿದ್ದರು, ಬ್ಲಾಕ್ ಮಟ್ಟದಿಂದ ಬಲವಾದ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಂಡಿರುವುದು.
- ಎಲ್ಲಾ CRP ಗಳು ಶಾಲಾಭಿವೃದ್ಧಿ ಉಪಕ್ರಮ ಚಟುವಟಿಕೆಗಳ ವೀಕ್ಷಣಾ ಸಾಧನ ಮತ್ತು ಪರಿಣಾಮಕಾರಿ ಅಭ್ಯಾಸಗಳ ಮೇಲ್ವಿಚಾರಣೆ ಮತ್ತು ಹಂಚಿಕೆಯನ್ನು ಬಲಪಡಿಸಲು ಅತ್ಯುತ್ತಮ ಅಭ್ಯಾಸ ಸಾಧನಗಳ ಮೇಲೆ ಕೇಂದ್ರೀಕರಿಸಿರುವುದು.
- ಎಲ್ಲಾ CRP ಗಳು ತರಬೇತಿ ಮತ್ತು ಮಾರ್ಗದರ್ಶನ ಹಾಗೂ ನಾಯಕತ್ವದ ಅಂಶಗಳಿಗೆ ಸಂಬಂಧಿಸಿದ ಅವಧಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದು.





# ಶೈಕ್ಷಣಿಕ ನಾಯಕರಿಗೆ ನಾಯಕತ್ವ ಕಾರ್ಯಾಗಾರ

## ಮೊದಲನೇ ಕಾರ್ಯಾಗಾರದ ಪ್ರಮುಖ ಅಂಶಗಳು:

- ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಕೆ.ಎಚ್.ಉಮೇಶ, BRP ದಕ್ಷಿಣ ವಲಯ 4 ರವರು , ಬೆಂಗಳೂರು ನಗರ ಜಿಲ್ಲೆಯ ಕಾರ್ಯಾಗಾರದಲ್ಲಿ ಹಾಗೂ ಶ್ರೀಮತಿ ಲಾವಣ್ಯ, ಉಪನ್ಯಾಸಕರು, ಡಯಟ್, ಬೆಂಗಳೂರು ಉತ್ತರ ಜಿಲ್ಲೆ ಇವರು ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಕಾರ್ಯಕ್ರಮದ ಬಗ್ಗೆ ಚರ್ಚಿಸಿದರು.
- ಶ್ರೀಯುತ ಡಾ| | ಎಚ್.ಬಿ ಚಂದ್ರಶೇಖರ್, ನಿವೃತ್ತ ಹಿರಿಯ ಉಪನ್ಯಾಸಕರು, ಡಯಟ್, ಬೆಂಗಳೂರು ನಗರ ಜಿಲ್ಲೆ ರವರು FLN reach ಕಾರ್ಯಕ್ರಮವನ್ನು ಚರ್ಚಿಸಿದರು.
- ಶ್ರೀಯುತ ವಿಶ್ವನಾಥ ಕೆ, ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು( ಆರ್.ಎಂ.ಎಸ್.ಎ) ರವರು ಬೆಂಗಳೂರು ನಗರ ಜಿಲ್ಲೆ, ಕಾರ್ಯಾಗಾರದಲ್ಲಿ ಹಾಗೂ ಶ್ರೀಮತಿ ಪ್ರಮಿತಾ ಅಧೋನಿ, ಪ್ರಾಂಶುಪಾಲರು, ಡಯಟ್, ಬೆಂಗಳೂರು ಉತ್ತರ ಜಿಲ್ಲೆ ರವರು ಬೆಂಗಳೂರು ಉತ್ತರ ಜಿಲ್ಲಾ ಕಾರ್ಯಾಗಾರದಲ್ಲಿ ಕಾರ್ಯಕ್ರಮಗಳನ್ನು ವೀಕ್ಷಣೆ ಮತ್ತು ಮಾರ್ಗದರ್ಶನ ನೀಡುವ ಬೆಂಬಲ ವ್ಯವಸ್ಥೆಯ ಬಗ್ಗೆ ಹಾಗೂ ದಾಖಲೆ ನಿರ್ವಹಣೆ ಬಗ್ಗೆ ಚರ್ಚಿಸಿದರು.
- ಸಿ.ಆರ್.ಪಿ ಯವರೊಂದಿಗೆ 9 ಬ್ಲಾಕ್ ಗಳಿಂದ 15 BRP, 6 ECO ಗಳು ಕಾರ್ಯಾಗಾರದಲ್ಲಿ ಭಾಗಿಯಾಗಿದ್ದರು.

## ಎರಡನೇ ಕಾರ್ಯಾಗಾರದ ಪ್ರಮುಖ ಅಂಶಗಳು:

- ಕಾರ್ಯಾಗಾರವನ್ನು ಶ್ರೀಯುತ ಪ್ರವೀಣ್ ನಾಯ್ಡು, ಸಂಪನ್ಮೂಲ ವ್ಯಕ್ತಿಗಳು, ಶ್ರೀಮತಿ ಸೆಲ್ವಿ, ಉಪನ್ಯಾಸಕರು, ಡಯಟ್, ಬೆಂಗಳೂರು ನಗರ ಜಿಲ್ಲೆ ರವರು ಮುನ್ನೆಡೆಸಿದರು.
- ಕಾರ್ಯಾಗಾರದಲ್ಲಿ ಬುನಾದಿಹಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (FLN), Learning by Assessment (LBA) ಮತ್ತು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ, ಪಾಲಕರ ಸಭೆ ಹಾಗೂ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳ ಕುರಿತು ತರಬೇತಿ ನೀಡಲಾಯಿತು. ಇದರ ಜೊತೆಗೆ ಸಿ.ಆರ್.ಪಿ ಗಳಿಗೆ ತರಗತಿ ವೀಕ್ಷಣೆ, ಶಿಕ್ಷಕರಿಗೆ ಪರಿಣಾಮಕಾರಿ ಪ್ರತಿಕ್ರಿಯೆ ನೀಡುವುದು ಮತ್ತು ನವೀನ್ಯಯುತ ತರಗತಿ ಅಭ್ಯಾಸಗಳನ್ನು ಅನುಷ್ಠಾನಗೊಳಿಸಲು ಬೆಂಬಲ ನೀಡುವುದು ಮತ್ತು ಅದರ ಬಗ್ಗೆ ಮಾರ್ಗದರ್ಶನ ನೀಡಲಾಯಿತು.
- CRP ರವರ ಶಾಲಾ ಭೇಟಿ, ಶಿಕ್ಷಕರಿಗೆ ಮಾರ್ಗದರ್ಶನ, ಹಾಗೂ ಕಾರ್ಯಕ್ರಮ ಅನುಷ್ಠಾನದ ಸವಾಲುಗಳು ಮತ್ತು ಉತ್ತಮ ಅಭ್ಯಾಸಗಳ ಕುರಿತ ಚರ್ಚೆಗಳಲ್ಲಿ ಪಾಲ್ಗೊಂಡರು. ಇದರ ಪರಿಣಾಮವಾಗಿ ಕ್ಲಸ್ಟರ್ ಮತ್ತು ಬ್ಲಾಕ್ ಮಟ್ಟದ ಮೇಲ್ವಿಚಾರಣೆ, ದಾಖಲೆ ನಿರ್ವಹಣೆ ಮತ್ತು ಅನುಸರಣಾ ಪ್ರಕ್ರಿಯೆಗಳ ಸ್ಪಷ್ಟತೆ ಹೆಚ್ಚಿತು.
- ನಾಯಕರು ಎಂದರೆ ಯಾರು? ನಾಯಕರಾದವರು ಹೇಗೆ ಕಾರ್ಯ ನಿರ್ವಹಿಸುತ್ತಾರೆ ಹಾಗೂ ನಾಯಕರಾದವರ ಗುಣಲಕ್ಷಣಗಳು ಏನು ಎಂಬುದರ ಬಗ್ಗೆ ಚರ್ಚಿಸಲಾಯಿತು.





# ಶೈಕ್ಷಣಿಕ ನಾಯಕರಿಗೆ ನಾಯಕತ್ವ ಕಾರ್ಯಾಗಾರ

### 1 ಮತ್ತು 2 ನೇ ಕಾರ್ಯಾಗಾರದಲ್ಲಿ ಭಾಗವಹಿಸಿದ ಸಿ.ಆರ್.ಪಿ ರವರ ವಲಯವಾರು ದತ್ತಾಂಶ:







- ಮೊದಲನೆಯ ಕಾರ್ಯಾಗಾರದಲ್ಲಿ ಶೇಕಡಾ 85.71% ಸಿ.ಆರ್.ಪಿ ರವರು ಭಾಗವಹಿಸಿದ್ದರು.
- ಎರಡನೇ ಕಾರ್ಯಾಗಾರದಲ್ಲಿ 78.23% ಸಿ.ಆರ್.ಪಿ ರವರು ಭಾಗವಹಿಸಿದ್ದರು.
- ಮೇಲಿನ ದತ್ತಾಂಶಗಳನ್ನು ಗಮನಿಸಿದಾಗ ಇಲಾಖಾ ಕಾರ್ಯಾಗಾರಗಳು ಸತತ 4 ತಿಂಗಳಿಂದ ನಡೆದಿರುವ ಕಾರಣ ಆ ಕಾರ್ಯಾಗಾರಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಸಿ.ಆರ್.ಪಿ ರವರನ್ನು ನೇಮಿಸಿದ್ದರಿಂದ ಮೊದಲನೇ ಕಾರ್ಯಾಗಾರಕ್ಕಿಂತ ಎರಡನೇ ಕಾರ್ಯಾಗಾರದಲ್ಲಿ ಸಿ.ಆರ್.ಪಿ ರವರು ಭಾಗವಹಿಸಿದ ಸಂಖ್ಯೆ ಕಡಿಮೆಯಾಗಿದೆ.

# ಡಯಟ್ ವಿಷನ್ ಕಾರ್ಯಾಗಾರ

ಜಿಲ್ಲಾ ಶೈಕ್ಷಣಿಕ ನಾಯಕರಾಗಿ DIET ಸಂಸ್ಥೆಯ ಸಾಮರ್ಥ್ಯವನ್ನು ಬಲಪಡಿಸುವ ಉದ್ದೇಶದಿಂದ ಈ ವಿಷನ್ ಕಾರ್ಯಾಗಾರವನ್ನು ರೂಪಿಸಲಾಗಿದೆ. ಈ ಕಾರ್ಯಾಗಾರವು DIET ಸದಸ್ಯರ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟಪಡಿಸುವುದರ ಜೊತೆಗೆ, ಪರಸ್ಪರ ಸಹಯೋಗವನ್ನು ಉತ್ತೇಜಿಸುತ್ತದೆ. ಜೊತೆಗೆ, ಪ್ರಮುಖ ಶಾಲಾ ಸುಧಾರಣಾ ಉಪಕ್ರಮಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಬೆಳೆಸುವುದರ ಮೇಲೆ ಇದು ಕೇಂದ್ರೀಕರಿಸಿದೆ. ಪರಿಣಾಮಕಾರಿ ಮೇಲ್ವಿಚಾರಣೆಗೆ ಅಗತ್ಯವಾದ ದತ್ತಾಂಶ ಮತ್ತು ವೀಕ್ಷಣಾ ಸಾಧನಗಳ ಬಳಕೆಯನ್ನು ಹೆಚ್ಚಿಸುವುದು ಇದರ ಪ್ರಮುಖ ಅಂಶವಾಗಿದೆ. ಅಂತಿಮವಾಗಿ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಸುಧಾರಿಸಲು ಸ್ಪಷ್ಟ ಹಾಗೂ ಕಾರ್ಯಸಾಧ್ಯ ಆದ್ಯತೆಗಳೊಂದಿಗೆ ಕಾರ್ಯನಿರ್ವಹಿಸುವುದು DIET ವಿಷನ್ 2026-27 ಕಾರ್ಯಾಗಾರದ ಮುಖ್ಯ ಗುರಿಯಾಗಿದೆ.

## ಉದ್ದೇಶಗಳು

- ಶೈಕ್ಷಣಿಕ ನಾಯಕರಾಗಿ DIET ಅಧಿಕಾರಿಗಳ ನಾಯಕತ್ವವನ್ನು ಬಲಪಡಿಸುವುದು ಹಾಗೂ ವಿವಿಧ ವಿಭಾಗಗಳಲ್ಲಿ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆಯನ್ನು ಪಡೆದುಕೊಳ್ಳುವುದು.
- FLN ಅನ್ನು ಚಾಲನೆ ಮಾಡಲು ಮತ್ತು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ಸುಧಾರಿಸಲು ಹಂಚಿಕೆಯ ದೃಷ್ಟಿ ಮತ್ತು ಸಹಯೋಗದ ವಿಧಾನವನ್ನು ರಚಿಸುವುದು.
- ಸ್ಪಷ್ಟ ಹೊಣೆಗಾರಿಕೆಯೊಂದಿಗೆ DIET, ಬ್ಲಾಕ್ ಮತ್ತು ಕ್ಲಸ್ಟರ್ ಗಳ ಜೊತೆ ಸಮನ್ವಯವನ್ನು ಸುಧಾರಿಸುವುದು.
- DIET Vision 2026-27 ಕಡೆಗೆ ಸ್ಪಷ್ಟ ಮಾರ್ಗಸೂಚಿ- (ನಿರಂತರ ಪ್ರತಿಬಿಂಬ, ಸಾಮರ್ಥ್ಯಾಭಿವೃದ್ಧಿ ಮತ್ತು ಪ್ರಗತಿಗಾಗಿ ಕಾರ್ಯಯೋಜನೆ)

## ಮುಖ್ಯಾಂಶಗಳು

- DIET ನಾ ವಿಭಾಗಗಳು ಹಾಗೂ ಪ್ರತಿಯೊಂದು ವಿಭಾಗದ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಅರ್ಥಮಾಡಿಕೊಂಡಿರುವುದು.
- ಕಾರ್ಯಾಗಾರದಲ್ಲಿ 20 DIET ನ ಉಪನ್ಯಾಸಕರು ಹಾಗೂ ಡಯಟ್ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.
- 3 ಶಾಲಾಭಿವೃದ್ಧಿ ಉಪಕ್ರಮಗಳ ಬಗ್ಗೆ ಚಿಂತನೆಗಳನ್ನು ನಡೆಸಲಾಯಿತು ಮತ್ತು ಅವುಗಳ ಸವಾಲುಗಳು ಮತ್ತು ಯಶಸ್ಸನ್ನು ಚರ್ಚಿಸಲಾಯಿತು.
- DIET ಮತ್ತು ಬ್ಲಾಕ್ ಮಟ್ಟದ ಅಧಿಕಾರಿಗಳನ್ನು ಹೇಗೆ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಬಹುದು ಮತ್ತು ಮಾರ್ಗದರ್ಶನ ಮಾಡಬಹುದು ಎಂಬುದರ ಕುರಿತು ಹಾಗೂ ನಾಯಕತ್ವದ ಕುರಿತು ಅಧಿವೇಶನವನ್ನು ನಡೆಸಲಾಯಿತು.
- ಮಕ್ಕಳ ಶಿಕ್ಷಣದ ಫಲಿತಾಂಶಗಳನ್ನು ಸುಧಾರಿಸಲು FLN ನ ಹಂಚಿಕೆಯ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸಲಾಯಿತು.





# ಪ್ರಗತಿ ಹೆಜ್ಜೆ-  ಒಂದು ಸಂಭ್ರಮದ ವೇದಿಕೆ

ಶಾಲೆಗಳಲ್ಲಿ ಕೈಗೊಂಡ **ಯೋಜಿತ ಮತ್ತು ಫಲಿತಾಂಶ ಆಧಾರಿತ ಉತ್ತಮ ಅಭ್ಯಾಸಗಳು, ಕಾರ್ಯಪ್ರಕ್ರಿಯೆಗಳು ಹಾಗೂ ಸೂಕ್ಷ್ಮ ಆವಿಷ್ಕಾರಗಳನ್ನು** ಹಂಚಿಕೊಳ್ಳಲು ವೇದಿಕೆ ಒದಗಿಸುವುದು. **ಶಾಲಾಭಿವೃದ್ಧಿ ಉಪಕ್ರಮ ಮತ್ತು ಶಾಲೆಯ ವಿನೂತನ** ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಮಕ್ಕಳಲ್ಲಿ ಅನುಭವಾತ್ಮಕ ಕಲಿಕೆಗೆ ಪ್ರೋತ್ಸಾಹಿಸಿದ ಶಾಲೆಗಳನ್ನು **ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ** ಗುರುತಿಸಿ ಪ್ರಶಂಸಿಸುವುದು. ವಿದ್ಯಾರ್ಥಿಗಳ ಸೃಜನಶೀಲ ಚಟುವಟಿಕೆಗಳನ್ನು ಪ್ರದರ್ಶಿಸಲು ಹಾಗೂ ಉತ್ತೇಜಿಸಲು ವೇದಿಕೆ ಕಲ್ಪಿಸುವುದು. ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಿದ ಉತ್ತಮ ಅಭ್ಯಾಸಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಶಾಲೆಗಳ ನಡುವೆ ಸಕಾರಾತ್ಮಕ, **ಸ್ಪರ್ಧಾತ್ಮಕ ಮನೋಭಾವವನ್ನು** ಬೆಳೆಸುವುದು.




## ಉದ್ದೇಶಗಳು :

- ಶಾಲೆಗಳಲ್ಲಿ ಕೈಗೊಂಡ **ಯೋಜಿತ ಮತ್ತು ಫಲಿತಾಂಶ ಆಧಾರಿತ ಉತ್ತಮ ಅಭ್ಯಾಸಗಳು, ಕಾರ್ಯಪ್ರಕ್ರಿಯೆಗಳು ಹಾಗೂ ಸೂಕ್ಷ್ಮ ಆವಿಷ್ಕಾರಗಳನ್ನು** ಹಂಚಿಕೊಳ್ಳಲು ವೇದಿಕೆ ಒದಗಿಸುವುದು.
- **ಶಾಲಾಭಿವೃದ್ಧಿ ಉಪಕ್ರಮ ಮತ್ತು ಶಾಲೆಯ ವಿನೂತನ** ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಮಕ್ಕಳಲ್ಲಿ ಅನುಭವಾತ್ಮಕ ಕಲಿಕೆಗೆ  ಪ್ರೋತ್ಸಾಹಿಸಿದ ಶಾಲೆಗಳನ್ನು **ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ** ಗುರುತಿಸಿ ಪ್ರಶಂಸಿಸುವುದು.
- ವಿದ್ಯಾರ್ಥಿಗಳ ಸೃಜನಶೀಲ ಚಟುವಟಿಕೆಗಳನ್ನು ಪ್ರದರ್ಶಿಸಲು ಹಾಗೂ ಉತ್ತೇಜಿಸಲು ವೇದಿಕೆ ಕಲ್ಪಿಸುವುದು.
- ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಿದ ಉತ್ತಮ ಅಭ್ಯಾಸಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಶಾಲೆಗಳ ನಡುವೆ ಸಕಾರಾತ್ಮಕ **ಸ್ಪರ್ಧಾತ್ಮಕ ಮನೋಭಾವವನ್ನು** ಬೆಳೆಸುವುದು.






## ಬ್ಲಾಕ್ ಹಂತದ ಪ್ರಗತಿ ಹೆಜ್ಜೆ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು
7

ಕ್ಷೇತ್ರ ಸಮನ್ವಯಾಧಿಕಾರಿಗಳು
9

ಸಿ.ಆರ್.ಪಿ ಮತ್ತು ಬಿ.ಆರ್.ಪಿ ಗಳು
81

ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು
306

## ಜಿಲ್ಲಾ ಹಂತದ ಪ್ರಗತಿ ಹೆಜ್ಜೆ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ

ಡಿ.ಡಿ.ಪಿ.ಐ ಮತ್ತು ಪ್ರಾಂಶುಪಾಲರು
3

ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು
23

ಡಿ.ವೈ.ಪಿ.ಸಿ
1

ಬ್ಲಾಕ್ ಹಂತದ ಅಧಿಕಾರಿಗಳು
9

ಸಿ.ಆರ್.ಪಿ ಮತ್ತು ಬಿ.ಆರ್.ಪಿ ಗಳು
58

ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು
91

## ಪ್ರಗತಿ ಹೆಜ್ಜೆಯ ಪ್ರಮುಖ  ಅಂಶಗಳು:

- ಜನವರಿ 24 ರಂದು ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯ 9 ಬ್ಲಾಕ್‌ಗಳಲ್ಲಿ ಪ್ರಗತಿಯ ಹೆಜ್ಜೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜನೆ ಮಾಡಲಾಯಿತು.
- ಜಿಲ್ಲಾ ಹಂತದಲ್ಲಿ ಪ್ರತಿ ತಾಲ್ಲೂಕಿನಿಂದ 3 ಶಾಲೆಗಳು ಭಾಗವಹಿಸಿದ್ದವು, ಶಿಕ್ಷಕರು ಶಾಲೆಯ ಹಂತದಲ್ಲಿ ಅನುಷ್ಠಾನ ಮಾಡಿದ ವಿನೂತನ ಯೋಜನೆಯನ್ನು ಜಿಲ್ಲಾ ಹಂತದಲ್ಲಿ ಪ್ರಸ್ತುತಿ ಪಡಿಸುವ ಮೂಲಕ ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಅಭಿವೃದ್ಧಿಯಾಗಿದೆ ಎಂದು ತಿಳಿಸಿದರು.
- ಕಾರ್ಯಕ್ರಮದಲ್ಲಿ ಜಿಲ್ಲೆಯ 2 ಡಯಟ್ ಗಳ 9 ವಲಯಗಳಿಂದ ಆಗಮಿಸಿದ್ದ ವಿದ್ಯಾದೀಪ ಅನುಷ್ಠಾನಾಧಿಕಾರಿಗಳು ತಮ್ಮ ವಲಯ ಮತ್ತು ಶಾಲೆಗಳಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು, ನಾವಿನ್ಯಯುತ ಕಾರ್ಯಕ್ರಮಗಳ ಬಗ್ಗೆ ಪ್ರಸ್ತುತ ಪಡಿಸಿದರು.
- ಪ್ರಮುಖವಾಗಿ FLN ಸಾಧನೆಗೆ ನೀಡಿದ ಬೆಂಬಲ, ಬೆಳಗಿನ ಪ್ರಾರ್ಥನಾ ಚಟುವಟಿಕೆಗಳಿಂದ ವಿದ್ಯಾರ್ಥಿಗಳಲ್ಲಿ ಕಂಡ ಬದಲಾವಣೆ, ಪೋಷಕರ ಸಭೆಗಳ ಪರಿಣಾಮ ಹಾಗೂ ಪಾಲ್ಗೊಳ್ಳುವಿಕೆ, ಮಕ್ಕಳು ಶಾಲೆ ಬಿಟ್ಟುಹೋಗುವಿಕೆ ತಡೆ ಕ್ರಮಗಳು, ಮನೆಯಲ್ಲಿ ಓದುವ ಮೂಲೆ ಹೀಗೆ ಮುಂತಾದ ಅಂಶಗಳ ಬಗ್ಗೆ ಹಂಚಿಕೊಂಡರು.
- DDPI, 2 DIET ಪ್ರಾಂಶುಪಾಲರು ಮತ್ತು 2 DIET ಗಳಿಂದ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು ಈ ಕಾರ್ಯಕ್ರಮವನ್ನು ಮುನ್ನಡೆಸಿದರು.





# ಪ್ರಗತಿ ಹೆಜ್ಜೆ- ಒಂದು ಸಂಭ್ರಮದ ವೇದಿಕೆ

| ಕ್ಷೇತ್ರ ಸಮನ್ವಯಾಧಿಕಾರಿಗಳು | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಿ.ಆರ್.ಪಿ ಮತ್ತು ಬಿ.ಆರ್.ಪಿ ಗಳು | ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು |
|---|---|---|---|
| 9 | 7 | 81 | 306 |

## ಬ್ಲಾಕ್ ಹಂತದ ಪ್ರಗತಿ ಹೆಜ್ಜೆ ಕಾರ್ಯಕ್ರಮದಲ್ಲಿ ಭಾಗೀದಾರರ ಅಭಿಪ್ರಾಯ



**ಶ್ರೀಮತಿ ರೇಖಾ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಂಗಳೂರು ದಕ್ಷಿಣ ವಲಯ - 1**

ಶಾಲಾ ಶಿಕ್ಷಕರು ತಮ್ಮ ತರಗತಿಯಲ್ಲಿ ಅನುಭವಿಸಿದ ಸವಾಲುಗಳು, ಯಶಸ್ಸಿನ ಕಥೆಗಳು ಮತ್ತು ಕಲಿಕೆಯ ಹೊಸ ವಿಧಾನಗಳನ್ನು ಪರಸ್ಪರ ಹಂಚಿಕೊಳ್ಳಲು ಈ ಕಾರ್ಯಕ್ರಮವು ಮಹತ್ವದ ವೇದಿಕೆಯಾಗಿ ಪರಿಣಮಿಸುತ್ತದೆ. ಇದರಿಂದ ಶಿಕ್ಷಕರು ಒಬ್ಬರನ್ನೊಬ್ಬರು ಪ್ರೇರೇಪಿಸಿಕೊಂಡು, ತಮ್ಮ ಬೋಧನಾ ವಿಧಾನಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸಿಕೊಳ್ಳಲು ಸಹಾಯವಾಗುತ್ತದೆ.
ಇದಲ್ಲದೆ, ಇತರ ಶಾಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಉತ್ತಮ ಅಭ್ಯಾಸಗಳನ್ನು ತಿಳಿದುಕೊಳ್ಳುವ ಮೂಲಕ, ಅವುಗಳನ್ನು ತಮ್ಮ ಶಾಲೆಗಳ ಪರಿಸ್ಥಿತಿಗೆ ಅನುಗುಣವಾಗಿ ಅಳವಡಿಸಿಕೊಳ್ಳುವ ಅವಕಾಶವೂ ದೊರೆಯುತ್ತದೆ. ಈ ಪರಸ್ಪರ ಕಲಿಕೆ ಮತ್ತು ಹಂಚಿಕೆ ಪ್ರಕ್ರಿಯೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದರೊಂದಿಗೆ, ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

ಪ್ರಗತಿಯ ಹೆಜ್ಜೆ ಕಾರ್ಯಕ್ರಮವು ಶಾಲೆಗಳಲ್ಲಿ ನಡೆದ ವಿವಿಧ ಶೈಕ್ಷಣಿಕ ಯಶೋಗಾಥೆಗಳನ್ನು ಹಂಚಿಕೊಳ್ಳುವ ಮಹತ್ವದ ವೇದಿಕೆಯಾಗಿದ್ದು, ನಮ್ಮ ವಲಯದ ಎಲ್ಲಾ ಕ್ಲಸ್ಟರ್‌ಗಳಿಂದ ಆಯ್ಕೆಯಾದ ಶಾಲೆಗಳು ಭಾಗವಹಿಸಿ ತಮ್ಮ ತಮ್ಮ ಶಾಲೆಗಳ ವಿನೂತನ ಚಟುವಟಿಕೆಗಳನ್ನು ಇತರ ಶಾಲೆಗಳೊಂದಿಗೆ ಹಂಚಿಕೊಂಡವು. ಇದರಿಂದ ಶಿಕ್ಷಕರಿಗೂ ಹಾಗೂ ಶಾಲೆಗಳಿಗೂ ಪರಸ್ಪರ ಕಲಿಕೆಯ ಉತ್ತಮ ಅವಕಾಶ ದೊರಕಿದ್ದು, ಹೊಸ ಆಲೋಚನೆಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಿದ ಪರಿಣಾಮಕಾರಿ ವೇದಿಕೆಯಾಯಿತು.



**ಶ್ರೀಮತಿ ಸೌಭಾಗ್ಯ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬೆಂಗಳೂರು ದಕ್ಷಿಣ ವಲಯ - 3**



**ಶ್ರೀ ರಾಮಕೃಷ್ಣ, ಮುಖ್ಯ ಶಿಕ್ಷಕರು GHPS ಪೂರ್ಣಪುರ ಬೆಂಗಳೂರು ಉತ್ತರ ವಲಯ - 2**

ಶಾಲೆಗಳಲ್ಲಿ ನಾವು ಅನುಷ್ಠಾನಗೊಳಿಸಿರುವ ನವೀನ ಚಟುವಟಿಕೆಗಳನ್ನು ತೋರ್ಪಡಿಸಿಕೊಳ್ಳಲು ಹಾಗೂ ನಮ್ಮ ಪ್ರಯತ್ನಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಈ ವೇದಿಕೆ ಅತ್ಯಂತ ಉಪಯುಕ್ತವಾಗಿದೆ. ಇದರ ಮೂಲಕ ನಮ್ಮ ಶಾಲೆಯಲ್ಲಿನ ಉತ್ತಮ ಕಾರ್ಯಪದ್ಧತಿಗಳನ್ನು ಪರಿಚಯಿಸುವುದರ ಜೊತೆಗೆ, ಇತರೆ ಶಾಲೆಗಳು ಹೊಸತನದಿಂದ ರೂಪಿಸಿರುವ ಕಲಿಕೋಪಕರಣಗಳು ಮತ್ತು ಬೋಧನಾ ವಿಧಾನಗಳನ್ನು ಗಮನಿಸಿ ಕಲಿಯುವ ಅವಕಾಶವೂ ದೊರೆಯುತ್ತದೆ.
ಇದಲ್ಲದೆ, ಪ್ರಗತಿ ಹೆಜ್ಜೆ ಕಾರ್ಯಕ್ರಮವು ಇಂತಹ ಎಲ್ಲಾ ಚಟುವಟಿಕೆಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಉತ್ತಮ ಅವಕಾಶವನ್ನು ಒದಗಿಸಿದೆ. ನಮ್ಮಂತಹ ಶಾಲೆಗಳನ್ನು ಗುರುತಿಸಿ ಬ್ಲಾಕ್ ಮಟ್ಟದವರೆಗೂ ಅವಕಾಶ ನೀಡಿರುವುದು ನಮಗೆ ಅತ್ಯಂತ ಸಂತೋಷ ಮತ್ತು ಪ್ರೇರಣೆಯ ವಿಷಯವಾಗಿದೆ. ಇದು ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಕಾರ್ಯಗಳನ್ನು ಕೈಗೊಳ್ಳಲು ನಮಗೆ ಉತ್ತೇಜನ ನೀಡುತ್ತದೆ

# ಪ್ರಗತಿ ಹೆಜ್ಜೆ-  ಒಂದು ಸಂಭ್ರಮದ ವೇದಿಕೆ

## ಜಿಲ್ಲಾ ಹಂತದ ಪ್ರಗತಿ ಹೆಜ್ಜೆ ಕಾರ್ಯಕ್ರಮದಲ್ಲಿ ಭಾಗೀದಾರರ ಅಭಿಪ್ರಾಯ



**ಶ್ರೀಮತಿ ನಾಗರತ್ನಮ್ಮ**
**ಮುಖ್ಯ ಶಿಕ್ಷಕರು**
**GHPS ಪಾಪರೆಡ್ಡಿಹಳ್ಳಿಪಾಳ್ಯ**

ಪ್ರಗತಿ ಹೆಜ್ಜೆ ಕಾರ್ಯಕ್ರಮವು ನಮ್ಮ ಶಾಲೆಯಲ್ಲಿ ಕೈಗೊಂಡಿರುವ ವಿನೂತನ ಹಾಗೂ ಸೃಜನಾತ್ಮಕ ಚಟುವಟಿಕೆಗಳನ್ನು ಹಂಚಿಕೊಳ್ಳಲು ಅತ್ಯುತ್ತಮ ವೇದಿಕೆಯಾಗಿದ್ದು, ನಮ್ಮ ಕಾರ್ಯಗಳನ್ನು ಇತರರ ಮುಂದೆ ಪ್ರದರ್ಶಿಸುವ ಅವಕಾಶವನ್ನು ಒದಗಿಸುತ್ತದೆ. ಇದರ ಮೂಲಕ ನಮ್ಮ ಪ್ರಯತ್ನಗಳಿಗೆ ಮಾನ್ಯತೆ ದೊರೆಯುವುದರ ಜೊತೆಗೆ, ಇನ್ನಷ್ಟು ಉತ್ತಮವಾಗಿ ಕೆಲಸ ಮಾಡಲು ಪ್ರೇರಣೆ ಸಿಗುತ್ತದೆ. ಇದೇ ವೇಳೆ, ಇತರ ಶಾಲೆಗಳು ಅನುಸರಿಸುತ್ತಿರುವ ಉತ್ತಮ ಅಭ್ಯಾಸಗಳು, ಹೊಸ ಕಲಿಕಾ ವಿಧಾನಗಳು ಮತ್ತು ಪರಿಣಾಮಕಾರಿ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲು ಇದು ಸಹಾಯಕವಾಗುತ್ತದೆ. ಆ ಅನುಭವಗಳನ್ನು ನಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳುವುದರಿಂದ ಮಕ್ಕಳ ಕಲಿಕೆ ಇನ್ನಷ್ಟು ಸುಧಾರಿಸುತ್ತದೆ. ಒಟ್ಟಾರೆ, ಈ ಕಾರ್ಯಕ್ರಮವು ಶಿಕ್ಷಕರ ನಡುವೆ ಜ್ಞಾನ ಹಂಚಿಕೆ, ಸಹಕಾರ ಮತ್ತು ಅಭಿವೃದ್ಧಿಗೆ ದಾರಿ ಮಾಡಿಕೊಡುವ ಮಹತ್ವದ ವೇದಿಕೆಯಾಗಿದೆ.

ಪ್ರಗತಿ ಹೆಜ್ಜೆ ಕಾರ್ಯಕ್ರಮವು ಈ ವರ್ಷ ಹಲವು ನಿರೀಕ್ಷೆಗಳೊಂದಿಗೆ ಆಯೋಜನೆಯಾಗಿದ್ದು, ಅದರ ಭಾಗವಾಗಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಪ್ರಾರಂಭದಲ್ಲಿ ಬ್ಲಾಕ್ ಹಂತದಲ್ಲಿ ನಮ್ಮ ಶಾಲೆಯ ಉತ್ತಮ ಅಭ್ಯಾಸಗಳು ಹಾಗೂ ವಿನೂತನ ಚಟುವಟಿಕೆಗಳನ್ನು ಪ್ರಸ್ತುತಪಡಿಸುವ ಅವಕಾಶ ದೊರೆತಿದ್ದು ಬಹಳ ಸಂತೋಷವನ್ನು ತಂದಿದೆ.
ಈ ಸಂದರ್ಭದಲ್ಲಿ ಜಿಲ್ಲಾಮಟ್ಟದ ಪ್ರಗತಿ ಕಾರ್ಯಕ್ರಮಕ್ಕೆ ನಾನು ಆಯ್ಕೆಯಾಗಿದ್ದು, ನಮ್ಮ ಶಾಲೆಯ ಕಾರ್ಯಗಳನ್ನು ಜಿಲ್ಲೆಯ ವೃತ್ತಿಪರರು ಹಾಗೂ ಡಯಟ್ ತಜ್ಞರ ಮುಂದೆ ಹಂಚಿಕೊಳ್ಳುವ ಅಪೂರ್ವ ಅವಕಾಶ ದೊರೆತಿದೆ. ಇದಕ್ಕಾಗಿ ಮಂತ್ರ ಸಂಸ್ಥೆಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.



**ಶ್ರೀಮತಿ ಸರಳ**
**ಮುಖ್ಯ ಶಿಕ್ಷಕರು**
**GHPS ಕರ್ಪೂರ**



**ಶ್ರೀ ಸುಬ್ರಮಣ್ಯ**
**ಬಿ.ಆರ್.ಪಿ**
**ಉತ್ತರ ವಲಯ - 2**

ಈ ಕಾರ್ಯಕ್ರಮವು ಮಕ್ಕಳ ಕಲಿಕೆಯನ್ನು ಆಸಕ್ತಿದಾಯಕವಾಗಿ ಮತ್ತು ಪರಿಣಾಮಕಾರಿಯಾಗಿ ರೂಪಿಸುವ ಉತ್ತಮ ವೇದಿಕೆಯಾಗಿದೆ. ಮಕ್ಕಳು ಚಟುವಟಿಕೆಗಳ ಮೂಲಕ ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ. ಇದರ ಜೊತೆಗೆ, ಶಿಕ್ಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಇತರ ಶಾಲೆಗಳ ಉತ್ತಮ ವಿಧಾನಗಳನ್ನು ಅಳವಡಿಸಿಕೊಳ್ಳಲು ಇದು ಸಹಾಯಕವಾಗುತ್ತದೆ. ಒಟ್ಟಾರೆ, ಇಂತಹ ಉಪಯುಕ್ತ ಕಾರ್ಯಕ್ರಮಗಳು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಹತ್ವವಾದವು; ಇವು ಇನ್ನಷ್ಟು ವ್ಯಾಪಕವಾಗಿ ನಡೆಯಲಿ ಎಂಬುದು ನನ್ನ ಆಶಯ.

# ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆ

**ಶಾಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಶಾಲಾಭಿವೃದ್ಧಿ ಉಪಕ್ರಮಗಳನ್ನು, ನಾವೀನ್ಯ ಚಟುವಟಿಕೆಗಳನ್ನು / ಯಶೋಗಾಥೆಗಳನ್ನು, ಮಕ್ಕಳಲ್ಲಿ ಉಂಟಾದ ಅನುಭವಾತ್ಮಕ ಕಲಿಕೆಯನ್ನು ಗುರುತಿಸಿ, ಇತರೆ ಶಾಲೆಗಳೊಂದಿಗೆ ಹಂಚಿಕೊಳ್ಳಲು ಕಲ್ಪಿಸಿರುವ ವೇದಿಕೆಯೇ "ಪ್ರಗತಿಯ ಹೆಜ್ಜೆ".** ಇದು ಶಾಲೆಗಳ ದೈನಂದಿನ ಶ್ರಮವನ್ನು ಸಂಭ್ರಮವಾಗಿ ಪರಿವರ್ತಿಸುವ ಮತ್ತು ಶಿಕ್ಷಕರ ಸಾಧನೆಗಳನ್ನು ಪ್ರಂಶಸಿಸುವ ಶೈಕ್ಷಣಿಕ ವೇದಿಕೆಯಾಗಿದೆ.

## ಉದ್ದೇಶಗಳು

- ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳ ಮೂಲಕ ಶಾಲಾ ಸುಧಾರಣೆಯ ಅನುಷ್ಠಾನವನ್ನು ಬೆಂಬಲಿಸಲು ಮುಖ್ಯೋಪಾಧ್ಯಾಯರಿಗೆ (HM) ಪರಿಣಾಮಕಾರಿ ಮಾರ್ಗದರ್ಶನ ಕಾರ್ಯಕ್ರಮವನ್ನು ಸ್ಥಾಪಿಸಲು ಬ್ಲಾಕ್ ಹಂತದ ಅಧಿಕಾರಿಗಳ ಜೊತೆ ಯೋಜನೆಯನ್ನು ಅಭಿವೃದ್ಧಿಪಡಿಸುವುದು.
- ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳ ಮೂಲಕ ಶಾಲಾ ಸುಧಾರಣೆ ಉಪಕ್ರಮದ ಪ್ರಗತಿಯನ್ನು ಚರ್ಚಿಸುವುದು.
- ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ (CRP) ಸಾಮರ್ಥ್ಯವೃದ್ಧಿ ಕಾರ್ಯಾಗಾರವನ್ನು ಯೋಜಿಸುವುದು.

## ಕಲಿಕಾ ಫಲ

- **ಸಭೆಗಳು**: 8 ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಯಿತು, ಈ ಸಭೆಯಲ್ಲಿ ಡಯಟ್ ಪ್ರಾಂಶುಪಾಲರು ಮತ್ತು ಅಧಿಕಾರಿಗಳು ಹಾಗೂ ಬ್ಲಾಕ್ ಹಂತದ ಅಧಿಕಾರಿಗಳು ಭಾಗವಹಿಸಿದ್ದರು.
- **ಸಂವಹನ**: ಶಾಲಾ ಉಪಕ್ರಮಗಳನ್ನು ಸುಗಮಗೊಳಿಸಲು ಮುಖ್ಯೋಪಾಧ್ಯಾಯರು ಮತ್ತು CRP ಗಳಿಗೆ ಡಯಟ್ ಕಡೆಯಿಂದ 21 ಸುತ್ತೋಲೆಗಳನ್ನು ಕಳುಹಿಸಿದರು.
- **ಸಹಯೋಗ**: DDPI ಮತ್ತು BEO ನಾಯಕತ್ವ ಸೇರಿದಂತೆ 18 ಬ್ಲಾಕ್ ಅಧಿಕಾರಿಗಳು ಮಾಸಿಕ ವಿಮರ್ಶೆಗಳು ಮತ್ತು ನಾವಿನ್ಯಯುತ ಚಟುವಟಿಕೆಗಳ ಪ್ರಗತಿ ಬಗ್ಗೆ ಚರ್ಚೆ ನಡೆಸುತ್ತಿದ್ದರು.
- **ಮನ್ನಣೆ**: CRP ರವರು ತಮ್ಮ ಕ್ಲಸ್ಟರ್ ನಿಂದ ಒಂದೊಂದು ಉತ್ತಮ ಶಾಲೆಗಳನ್ನು ಪ್ರಗತಿ ಹೆಜ್ಜೆ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿ ಕಳುಹಿಸಿದರು, ಎಲ್ಲಾ ವಲಯಗಳಿಂದ 27 ಶಾಲೆಗಳು ಆಯ್ಕೆಯಾಗಿ ಜಿಲ್ಲಾ ಹಂತಕ್ಕೆ ಬಂದಿದ್ದವು.





# ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆ

**ಬ್ಲಾಕ್ ಮಟ್ಟದ ಅಧಿಕಾರಿಗಳ ದೃಷ್ಟಿಕೋನ:** ಎಲ್ಲಾ 15 ಬ್ಲಾಕ್ ಮಟ್ಟದ ಅಧಿಕಾರಿಗಳು ತಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆಯನ್ನು ಖಚಿತಪಡಿಸಿಕೊಳ್ಳಲು ಗಮನಹರಿಸಿದರು.

**ಮುಖ್ಯ ಶಿಕ್ಷಕರಿಗೆ ಸುತ್ತೋಲೆಗಳು:** ಶಾಲಾ ಉಪಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಅನುಸರಣೆಗಾಗಿ ಮುಖ್ಯ ಶಿಕ್ಷಕರಿಗೆ DIET ನಿಂದ ಸುತ್ತೋಲೆಗಳನ್ನು ಕಳುಹಿಸಲಾಯಿತು.

**ಬ್ಲಾಕ್ ಅಧಿಕಾರಿಗಳಿಗೆ ಸುತ್ತೋಲೆಗಳು:** CRP ಗಳು ಮತ್ತು BRP ಗಳ ಸಾಮರ್ಥ್ಯಭಿವೃದ್ಧಿಗಾಗಿ ಬ್ಲಾಕ್ ಅಧಿಕಾರಿಗಳಿಗೆ DIET ನಿಂದ ಸುತ್ತೋಲೆಗಳನ್ನು ಕಳುಹಿಸಲಾಯಿತು

**ನಿಯಮಿತ ಮೇಲ್ವಿಚಾರಣೆ ಮತ್ತು ನವೀಕರಣಗಳು:** ಬ್ಲಾಕ್ ಮಟ್ಟದ ಅಧಿಕಾರಿಗಳು ಮಾಸಿಕ ಪರಿಶೀಲನಾ ಸಭೆಗಳಿಗೆ ಹಾಜರಾಗಿ ಮತ್ತು ಕಾರ್ಯಕ್ರಮದ ಪ್ರಗತಿಯ ಕುರಿತು ನಿಯಮಿತ ನವೀಕರಣಗಳನ್ನು DIET ಗೆ ಒದಗಿಸುತ್ತಾರೆ.

**PTM ಅನುಷ್ಠಾನ ವಿಮರ್ಶೆ**: ಜಿಲ್ಲೆಯಲ್ಲಿ ನಡೆದ 4 ಪೋಷಕ-ಶಿಕ್ಷಕರ ಸಭೆಗಳ (PTM ಗಳು) ಯಶಸ್ವಿ ಅನುಷ್ಠಾನವನ್ನು ಪರಿಶೀಲಿಸಲಾಯಿತು ಮತ್ತು ಚರ್ಚಿಸಲಾಯಿತು.

**CRP ಯೋಜನೆ:** PTM ಪ್ರಗತಿ ಮತ್ತು ಕಲಿಕೆಗಳ ಆಧಾರದ ಮೇಲೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ (CRP) ಉಪಕ್ರಮಗಳಿಗಾಗಿ ಯೋಜನೆಯನ್ನು ಪ್ರಾರಂಭಿಸಲಾಯಿತು.

**ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದು**: ನಿಯಮಿತ-ಕಲಿಕೆ ಮತ್ತು ಶಾಲಾ ಸುಧಾರಣೆಯನ್ನು ಉತ್ತೇಜಿಸಲು ಬ್ಲಾಕ್ ಮಟ್ಟದ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಉತ್ತಮ ಅಭ್ಯಾಸಗಳನ್ನು ಹಂಚಿಕೊಂಡಿದ್ದಾರೆ.





# DRT & BRT ಸಭೆ

ಬೆಂಗಳೂರು ನಗರ ಮತ್ತು ಉತ್ತರ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ FLN (ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ) ಕಾರ್ಯಕ್ರಮವನ್ನು ಪರಿಣಾಮಕಾರಿ ಅನುಷ್ಠಾನ ಮಾಡಲು ಮತ್ತು ಮಕ್ಕಳಲ್ಲಿ FLN ಸಾಧನೆ ಮಾಡಲು ಜಿಲ್ಲಾ ಹಂತದಲ್ಲಿ ಜಿಲ್ಲಾ ಸಂಪನ್ಮೂಲ ತಂಡವನ್ನು ರಚಿಸಲಾಗಿದೆ. ಈ ಉಪಕ್ರಮವನ್ನು ಬಲಪಡಿಸಲು DIET ನಿಂದ ಬ್ಲಾಕ್ ಮಟ್ಟದವರೆಗೆ FLN ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ತಂಡವು ವಿಷಯ ತಜ್ಞರು ಮತ್ತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು (BRP ಗಳು) ಸೇರಿದಂತೆ 17 ಸದಸ್ಯರನ್ನು ಒಳಗೊಂಡಿದೆ. ಗುಣಮಟ್ಟ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು FLN ಆರಂಭಿಕ ಮೌಲ್ಯಮಾಪನ ಸಾಧನಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ತರಗತಿ ಆಧಾರಿತ FLN ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದು ಮತ್ತು ಬ್ಲಾಕ್ ಮಟ್ಟದಲ್ಲಿ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಈ ತಂಡ ಹೊಂದಿದೆ.

## ಉದ್ದೇಶಗಳು

- **ಮಕ್ಕಳಲ್ಲಿ FLN ಅನ್ನು ಬಲಪಡಿಸುವುದು:** ಎಲ್ಲಾ ಶಾಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನವನ್ನು ಅತ್ಯುತ್ತಮಗೊಳಿಸುವುದು.
- **DRT ಸದಸ್ಯರನ್ನು ತೊಡಗಿಸಿಕೊಳ್ಳುವುದು:** ಯೋಜನೆ ಮತ್ತು ಮೇಲ್ವಿಚಾರಣೆಗಾಗಿ 17 ಸದಸ್ಯರ ಜಿಲ್ಲಾ ಸಂಪನ್ಮೂಲ ತಂಡವನ್ನು ಸಜ್ಜುಗೊಳಿಸುವುದು.
- **ಸಂಪನ್ಮೂಲ ಅಭಿವೃದ್ಧಿ**: FLN ಆರಂಭಿಕ ಮತ್ತು ಅಂತಿಮ ಮೌಲ್ಯಮಾಪನದ ಪ್ರಶ್ನೆಪತ್ರಿಕೆ ರಚನೆ ಮತ್ತು ತರಗತಿ ಚಟುವಟಿಕೆಗಳ ರಚನೆಗೆ ಮಾರ್ಗದರ್ಶನ ನೀಡುವುದು.
- **ಗುಣಮಟ್ಟದ ಭರವಸೆ**: DIET ನೋಡಲ್ ಅಧಿಕಾರಿಗಳು ಮತ್ತು ಬ್ಲಾಕ್ ಮಟ್ಟದ ಅಧಿಕಾರಿಗಳಿಗೆ ಬೆಂಬಲದ ಮೂಲಕ ಸ್ಥಿರವಾದ, ಉತ್ತಮ ಗುಣಮಟ್ಟದ ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

## ಕಲಿಕಾ ಫಲ

- **ಜಿಲ್ಲಾ ಮಟ್ಟ**: FLN ಚಟುವಟಿಕೆಗಳನ್ನು ಯೋಜಿಸಲು ಮತ್ತು ಮೇಲ್ವಿಚಾರಣೆ ಮಾಡಲು 12 ಸಕ್ರಿಯ ಸದಸ್ಯರೊಂದಿಗೆ 9 DRT ಸಭೆಗಳನ್ನು ನಡೆಸಲಾಗಿದೆ.
- **ಬ್ಲಾಕ್ ಮಟ್ಟ:** ಶಾಲಾ ಮಟ್ಟದ ಅನುಷ್ಠಾನವನ್ನು ಪರಿಣಾಮಕಾರಿಯಾಗಿಸಲು 20 ಸದಸ್ಯರನ್ನು ಒಳಗೊಂಡಂತೆ 5 ಬ್ಲಾಕ್‌ಗಳಲ್ಲಿ 30 BRT ಸಭೆಗಳನ್ನು ನಡೆಸಲಾಗಿದೆ.
- **ಪರಿಣಾಮ:** ಸ್ಥಿರವಾದ ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ತೊಡಗಿಸಿಕೊಳ್ಳುವಿಕೆಯ ಮೂಲಕ FLN ಸಂಪನ್ಮೂಲಗಳ ರಚನೆ ಮತ್ತು ಪ್ರಸರಣವನ್ನು ಸುವ್ಯವಸ್ಥಿತಗೊಳಿಸಲಾಗಿದೆ.

## ಫಲಿತಾಂಶ

- **ತಂಡ ಸಜ್ಜುಗೊಳಿಸುವಿಕೆ**: ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ 5 ಬ್ಲಾಕ್‌ಗಳಲ್ಲಿ 20 ಸದಸ್ಯರ ಬ್ಲಾಕ್ ಸಂಪನ್ಮೂಲ ತಂಡ (BRT) ಅನ್ನು ರಚಿಸಲಾಗಿದೆ.
- **ಮೌಲ್ಯಮಾಪನ ಪರಿಕರಗಳು**: ಆರಂಭಿಕ ಮತ್ತು ಅಂತಿಮ ಮೌಲ್ಯಮಾಪನ ಪತ್ರಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ದತ್ತಾಂಶವನ್ನು ಕ್ರೋಢಿಕರಿಸಲಾಗಿದೆ.
- **ಚಟುವಟಿಕೆಗಳ ವಿನ್ಯಾಸ:** ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು ಹೆಚ್ಚಿಸಲು ಮಾಸಿಕ ತರಗತಿವಾರು ಚಟುವಟಿಕೆಗಳನ್ನು ಒಳಗೊಂಡಂತೆ 8 ತಿಂಗಳ ರಚನಾತ್ಮಕ FLN ಚಟುವಟಿಕೆಗಳನ್ನು ವಿನ್ಯಾಸ ಮಾಡಿ ಅವುಗಳನ್ನು ಶಾಲಾ ಹಂತದಲ್ಲಿ ಅನುಷ್ಠಾನ ಮಾಡಲಾಗಿದೆ.
- **ಕಾರ್ಯತಂತ್ರದ ಮೇಲ್ವಿಚಾರಣೆ**: ನಿರಂತರ ಯೋಜನೆ ಮತ್ತು ಕಾರ್ಯಕ್ರಮ ಬಲವರ್ಧನೆಯನ್ನು ಖಚಿತಪಡಿಸಿಕೊಳ್ಳಲು DRT ಸಭೆಗಳನ್ನು ನಡೆಸಲಾಗಿದೆ.

ಪ್ರಮುಖ ಮುಖ್ಯಾಂಶಗಳು

# DRT & BRT ಸಭೆ

### FLN ಆರಂಭಿಕ ಮತ್ತು ಅಂತಿಮ ಮೌಲ್ಯಮಾಪನ ಪತ್ರಿಕೆಗಳ ಅಭಿವೃದ್ಧಿ ಮತ್ತು ಅನುಪಾಲನೆ

DRT ಮತ್ತು BRT ತಂಡಗಳು ಆರಂಭಿಕ ಮೌಲ್ಯಮಾಪನ ಪತ್ರಿಕೆಗಳನ್ನು 1
ರಚಿಸಲು ಸಹಕರಿಸಿದರು ಇವುಗಳನ್ನು DIET ಕಡೆಯಿಂದ ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಕಳುಹಿಸಿಕೊಡಲಾಯಿತು.

### ಮಾಸಿಕ FLN ಚಟುವಟಿಕೆಗಳು

ಪ್ರತಿ ತಿಂಗಳು DRT ಮತ್ತು BRT ತಂಡವು ರಚನೆ ಮಾಡಿದ ಮಾಸಿಕ
ಚಟುವಟಿಕೆಗಳನ್ನು ಜಿಲ್ಲೆಯಾದ್ಯಂತ ಶಾಲೆಗಳಿಗೆ ಕಳುಹಿಸಲಾಗಿದ್ದು ಶಾಲೆಯಲ್ಲಿ 2
ಮಕ್ಕಳಿಗೆ ಶಿಕ್ಷಕರು ಚಟುವಟಿಕೆಗಳನ್ನು ಮಾಡಲು ಸಹಾಯ ಮಾಡಿತು.

### ವಿಶೇಷ ಕಲಿಕಾ ಚಟುವಟಿಕೆಗಳು

ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸಲು ಮತ್ತು ಬುನಾದಿ
ಸಾಕ್ಷರತೆ ಮತ್ತು ಸಂಖ್ಯಾ ಕೌಶಲ್ಯಗಳನ್ನು ಬಲಪಡಿಸಲು ವಿಶೇಷ ದಸರಾ ರಜಾ
ಚಟುವಟಿಕೆಗಳನ್ನು ಯೋಜಿಸಲಾಯಿತು ಮತ್ತು 3
ಕಾರ್ಯಗತಗೊಳಿಸಲಾಯಿತು.

### DRT ಸಂಭ್ರಮ

ಎಲ್ಲಾ DRT ಸದಸ್ಯರು ಪ್ರಸ್ತುತ ಶೈಕ್ಷಣಿಕ ವರ್ಷದ ಬಗ್ಗೆ ಚಿಂತಿಸಲು ಮತ್ತು
ಮಕ್ಕಳಲ್ಲಿ FLN ಸಾಧಿಸಲು ಕಾರ್ಯಕ್ರಮದ ಕುರಿತು ಮುಂಬರುವ ಶೈಕ್ಷಣಿಕ
ವರ್ಷದ ಯೋಜನೆಯನ್ನು ರೂಪಿಸಲು ಒಟ್ಟಾಗಿ ಚರ್ಚೆ ಮಾಡಲಾಯಿತು. 4








# DRT ಸಂಭ್ರಮ

ದೀರ್ಘಕಾಲೀನ ಸುಸ್ಥಿರತೆ, ನಾಯಕತ್ವ ಮತ್ತು ನಾವೀನ್ಯತೆಯನ್ನು ಖಚಿತಪಡಿಸಿಕೊಳ್ಳಲು, ಬೆಂಗಳೂರು ನಗರ ಜಿಲ್ಲಾ ಸಂಪನ್ಮೂಲ ತಂಡವನ್ನು (DRT) ಗುರುತಿಸಲು ಮತ್ತು ಪ್ರೇರೇಪಿಸಲು DRT ಸಂಭ್ರಮ ವೇದಿಕೆಯನ್ನು ರಚಿಸಲಾಗಿದೆ. ಜಿಲ್ಲೆಯಾದ್ಯಂತ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ (FLN) ಕೌಶಲ್ಯಗಳನ್ನು ಸುಧಾರಿಸಲು DRT ಒಂದು ನಿರ್ಣಾಯಕ ಉಪವ್ಯವಸ್ಥೆಯಾಗಿ ಕಾರ್ಯನಿರ್ವಹಿಸಿದೆ.

## ಉದ್ದೇಶಗಳು

- FLN ರೀಚ್ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ಮತ್ತು ಕೊಡುಗೆ ನೀಡಿದ್ದಕ್ಕಾಗಿ DRT (ಜಿಲ್ಲಾ ಸಂಪನ್ಮೂಲ ತಂಡ) ಸದಸ್ಯರನ್ನು ಅಭಿನಂದಿಸಿ ಮತ್ತು ಕೃತಜ್ಞತೆ ಸಲ್ಲಿಸುವುದು.
- ಜಿಲ್ಲೆಯ ಎಲ್ಲಾ ಬ್ಲಾಕ್‌ಗಳಿಂದ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ (FLN) ಗೆ ಸಂಬಂಧಿಸಿದ ಯಶಸ್ಸಿನ ಕಥೆಗಳು ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಔಪಚಾರಿಕ ವೇದಿಕೆಯನ್ನು ಒದಗಿಸುವುದು.
- ಕಾರ್ಯತಂತ್ರದ ವಿನಿಮಯ: ಕಾರ್ಯಕ್ರಮದ ಸಮಯದಲ್ಲಿ ಸಕಾರಾತ್ಮಕ ಫಲಿತಾಂಶಗಳನ್ನು ನೀಡಿದ ಪರಿಣಾಮಕಾರಿ ಅನುಷ್ಠಾನ ತಂತ್ರಗಳನ್ನು ಪ್ರದರ್ಶಿಸಲು ಮತ್ತು ವಿನಿಮಯ ಮಾಡಿಕೊಳ್ಳಲು ವೇದಿಕೆಯನ್ನು ಒದಗಿಸುವುದು.

ಜಿಲ್ಲಾ ಸಂಪನ್ಮೂಲ ತಂಡವು (DRT) ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಶಾಲೆಗಳ ಮಕ್ಕಳಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ (FLN) ಕೌಶಲ್ಯಗಳನ್ನು ಸುಧಾರಿಸಲು ಒಂದು ಉಪವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. DRT ತನ್ನ ಪ್ರಯತ್ನಗಳನ್ನು ನಿರಂತರವಾಗಿ ಉಳಿಸಿಕೊಳ್ಳಲು, ಶಿಕ್ಷಣ ಸಮುದಾಯದಿಂದ ಪ್ರೇರಣೆ ಮತ್ತು ಗೌರವ ಅತ್ಯಗತ್ಯ. DRT ಸದಸ್ಯರಿಗೆ ಗುರಿ ಆಧಾರಿತ ಜಿಲ್ಲಾ ಮಟ್ಟದ ಸಭೆಗಳನ್ನು ಆಯೋಜಿಸುವ ಮೂಲಕ, ಅವರ ಕೆಲಸವನ್ನು ಗುರುತಿಸುವ ಮೂಲಕ ಮತ್ತು ಅವರಿಗೆ ಅರ್ಥಪೂರ್ಣ ಮೆಚ್ಚುಗೆಯನ್ನು ನೀಡುವ ಮೂಲಕ, ತಂಡದ ಸುಸ್ಥಿರತೆ ಮತ್ತು ನಿರಂತರತೆಯನ್ನು ಕಾಪಾಡಿಕೊಳ್ಳುವಲ್ಲಿ DIET ಪ್ರಮುಖ ಪಾತ್ರ ವಹಿಸುತ್ತದೆ. ಇದು DRT ಯ ನಾಯಕತ್ವ ಮತ್ತು ನವೀನ ವಿಧಾನಗಳ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ. DRT ಸಂಭ್ರಮವು ಈ ಎಲ್ಲಾ ಪ್ರೇರಣೆ ಮತ್ತು ಮೆಚ್ಚುಗೆಯನ್ನು ಒದಗಿಸಲು ರಚಿಸಲಾದ ವೇದಿಕೆಯಾಗಿದೆ.





# STEM ಲ್ಯಾಬ್

ವಿಜ್ಞಾನ ಕಲಿಕೆಯನ್ನು ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಾಯೋಗಿಕ ಮತ್ತು ಆಕರ್ಷಕವಾಗಿಸುವ ದೃಷ್ಟಿಕೋನದೊಂದಿಗೆ STEM ಲ್ಯಾಬ್ ಉಪಕ್ರಮವನ್ನು ಸ್ಥಾಪಿಸಲಾಯಿತು. ಮಕ್ಕಳಲ್ಲಿ ಸೃಜನಶೀಲತೆ, ನಾವೀನ್ಯತೆ ಮತ್ತು ಸಮಸ್ಯೆ ಪರಿಹರಿಸುವ ಕೌಶಲ್ಯಗಳನ್ನು ಬೆಳೆಸುವುದು ಪ್ರಾಥಮಿಕ ಉದ್ದೇಶವಾಗಿದೆ, ಇದು ಪರಿಶೋಧನೆ ಮತ್ತು ಆವಿಷ್ಕಾರಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುತ್ತದೆ. ಇದನ್ನು ಸಾಧಿಸಲು 10 ನಟ್-ಕಟ್ ಲ್ಯಾಬ್‌ಗಳು ಮತ್ತು ಸ್ಮಾರ್ಟ್ ತರಗತಿ ಕೊಠಡಿಗಳನ್ನು ಸ್ಥಾಪಿಸಲಾಯಿತು, ಇದು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪ್ರಯೋಗಗಳು ಮತ್ತು ಚಟುವಟಿಕೆಗಳ ಮೂಲಕ ವೈಜ್ಞಾನಿಕ ಪರಿಕಲ್ಪನೆಗಳೊಂದಿಗೆ ತೊಡಗಿಸಿಕೊಳ್ಳಬಹುದಾದ ಕ್ರಿಯಾತ್ಮಕ ಕಲಿಕಾ ವಾತಾವರಣವನ್ನು ಒದಗಿಸುತ್ತದೆ. ಈ ಪ್ರಯೋಗಾಲಯಗಳು ಕುತೂಹಲ ಚಾಲಿತ ಕಲಿಕಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ, ವಿಜ್ಞಾನ ಮತ್ತು ತಂತ್ರಜ್ಞಾನದ ನೈಜ ಪ್ರಪಂಚದ ಅನ್ವಯಿಕೆಗಳನ್ನು ಅನ್ವೇಷಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತವೆ. ಪ್ರತಿ ವರ್ಷ 1,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಉಪಕ್ರಮದಿಂದ ಪ್ರಯೋಜನ ಪಡೆಯುತ್ತಾರೆ, ಪಠ್ಯಪುಸ್ತಕಗಳನ್ನು ಮೀರಿ ವಿಜ್ಞಾನದ ಆಳವಾದ ತಿಳುವಳಿಕೆಯನ್ನು ಪಡೆಯುತ್ತಾರೆ.






## ಮುಖ್ಯಾಂಶಗಳು

- **ಶಿಕ್ಷಕರ ತರಬೇತಿ ಮತ್ತು ಸಾಮರ್ಥ್ಯಭಿವೃದ್ಧಿ** - ವಿಜ್ಞಾನ ಶಿಕ್ಷಕರು ತರಗತಿಯ ಬೋಧನೆಯಲ್ಲಿ ಪ್ರಾಯೋಗಿಕ ಕಲಿಕೆಯನ್ನು ಸಂಯೋಜಿಸಲು, ಸಂಕೀರ್ಣ ಪರಿಕಲ್ಪನೆಗಳನ್ನು ಸರಳೀಕರಿಸಲು ಮತ್ತು ಆಕರ್ಷಕ ಕಲಿಕೆಯ ಅನುಭವಗಳನ್ನು ರಚಿಸಲು ತರಬೇತಿಯನ್ನು ನೀಡಲಾಗಿದೆ.
- **ಚಟುವಟಿಕೆ ಆಧಾರಿತ ಕಲಿಕೆ** - ವಿದ್ಯಾರ್ಥಿಗಳು ಸಂವಾದಾತ್ಮಕ ಮತ್ತು ಅನುಭವದ ಕಲಿಕೆಯಲ್ಲಿ ತೊಡಗುತ್ತಾರೆ, ಪ್ರಯೋಗಗಳನ್ನು ಮಾಡುತ್ತಾರೆ, ಫಲಿತಾಂಶಗಳನ್ನು ಗಮನಿಸುತ್ತಾರೆ ಮತ್ತು ವಿಮರ್ಶಾತ್ಮಕ ಚಿಂತನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ.
- **ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು** - STEM ಪ್ರಯೋಗಾಲಯಗಳು ವೈಜ್ಞಾನಿಕ ವಿಚಾರಣೆ ಮತ್ತು ಆವಿಷ್ಕಾರವನ್ನು ಉತ್ತೇಜಿಸುವ ಮೂಲಕ ನಾವೀನ್ಯತೆ ಮತ್ತು ಸೃಜನಶೀಲತೆಯ ಸಂಸ್ಕೃತಿಯನ್ನು ಬೆಳೆಸುತ್ತವೆ.
- **ಕೌಶಲ್ಯ ಅಭಿವೃದ್ಧಿ** - ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸಮಸ್ಯೆ ಪರಿಹರಿಸುವ ಸಾಮರ್ಥ್ಯಗಳು, ತಾರ್ಕಿಕತೆ ಮತ್ತು ತಂಡದ ಕೆಲಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ, ಇದು STEM ಕ್ಷೇತ್ರಗಳಲ್ಲಿ ಭವಿಷ್ಯದ ವೃತ್ತಿಜೀವನಕ್ಕೆ ಅವಶ್ಯಕವಾಗಿದೆ.
- **ಸಂಪನ್ಮೂಲ ಪೂರೈಕೆ** - ಪ್ರಯೋಗಾಲಯಗಳು ಅಗತ್ಯ ಕಲಿಕಾ ಸಾಮಗ್ರಿಗಳೊಂದಿಗೆ ಸಜ್ಜುಗೊಂಡಿದ್ದು ಇದು ಚಟುವಟಿಕೆ ಆಧಾರಿತ ಕಲಿಕೆಯನ್ನು ಹೆಚ್ಚು ಪ್ರೋತ್ಸಾಹಿಸಿತು ಮತ್ತು ಮಕ್ಕಳ ವಿಜ್ಞಾನ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಉಂಟುಮಾಡಿತು.

# ಪೋಷಕರ-ಶಿಕ್ಷಕರ ಸಭೆಯು ವಿದ್ಯಾರ್ಥಿಗಳ ಶೈಕ್ಷಣಿಕ ಸುಧಾರಣೆಗೆ ಅವಕಾಶ ನೀಡಿತು


## ಚೈತ್ರ ಮತ್ತು ರಾಜು

**ಪೋಷಕರು, ಜಿ.ಎಂ.ಪಿ.ಎಸ್, ಕಮಲಾನಗರ,**
**ಬೆಂಗಳೂರು ಉತ್ತರ ಜಿಲ್ಲೆ 1**


"ಒಂದು ದಿನ, ನನ್ನ ಮಗುವಿನ ಶಾಲೆಯಿಂದ ಪೋಷಕ-ಶಿಕ್ಷಕರ ಸಭೆಗೆ ಹಾಜರಾಗಲು ನನಗೆ ಆಹ್ವಾನ ಬಂದಿತು ನಾನು ಪಾಲಕರ ಸಭೆಗೆ ಭಾಗವಹಿಸಿದೆ. ಸಭೆಯು ಬಹಳ ಮಾಹಿತಿಯುಕ್ತ ಮತ್ತು ಅರ್ಥಪೂರ್ಣವಾಗಿತ್ತು. ಶಿಕ್ಷಕರಾದ ಪದ್ಮಾ ನೀಡಿದ ವಿವರಣೆ ಮತ್ತು ಮಾರ್ಗದರ್ಶನದಿಂದ ನಾನು ವಿಶೇಷವಾಗಿ ಪ್ರೇರಿತನಾದೆ.

ಸಭೆಯ ಸಮಯದಲ್ಲಿ ನನ್ನ ಮಗುವಿನ ಮನೆಯಲ್ಲಿ ಕಲಿಕೆಯನ್ನು ಬೆಂಬಲಿಸುವ ಪ್ರಾಯೋಗಿಕ ಮಾರ್ಗಗಳನ್ನು ನಾನು ಕಲಿತಿದ್ದೇನೆ, ಉದಾಹರಣೆಗೆ ಕಲಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು, ಮೀಸಲಾದ ಅಧ್ಯಯನ ಸ್ಥಳವನ್ನು ಸ್ಥಾಪಿಸುವುದು, ಸರಳ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಮತ್ತು ನಿಯಮಿತ ಸಂಜೆ ಅಧ್ಯಯನ ವೇಳಾಪಟ್ಟಿಯನ್ನು ಯೋಜಿಸುವುದು. ಈ ವಿಚಾರಗಳನ್ನು ಮನೆಯಲ್ಲಿಯೇ ಕಾರ್ಯಗತಗೊಳಿಸುವ ಮೂಲಕ, ನನ್ನ ಮಗುವಿನ ಕಲಿಕೆ ಮತ್ತು ಬೆಳವಣಿಗೆಗೆ ನಾನು ಸಕ್ರಿಯವಾಗಿ ಕೊಡುಗೆ ನೀಡಲು ಸಾಧ್ಯವಾಯಿತು."



ಮನೆಯಲ್ಲಿ ಕಲಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದೆ.

ಪೋಷಕರ ಸಭೆಯ ಸಲಹೆ ಮತ್ತು ಮಾರ್ಗದರ್ಶನದಿಂದ ಪ್ರೇರಿತವಾಗಿದೆ.

ಅಭ್ಯಾಸವನ್ನು ಆನಂದ ಮತ್ತು ಮೋಜು ಮಾಡುವ ವಿವಿಧ ಕಲಿಕಾ ಸಾಮಗ್ರಿಗಳನ್ನು ವಿನ್ಯಾಸಗೊಳಿಸಲಾಗಿದೆ.

# ಸಣ್ಣ ಯೋಚನೆ ದೊಡ್ಡ ಬದಲಾವಣೆ - GHPS ತಾವರೆಕೆರೆ



GHPS ತಾವರೆಕೆರೆಯಲ್ಲಿ ಶಾಲಾ ನಾಯಕಿ ಶ್ರೀಮತಿ ಶ್ಯಾಮಲಾ ಅವರು ಪೋಷಕರು-ಶಿಕ್ಷಕರ ಸಭೆಗಳಲ್ಲಿ ತಾವು ನಿರೀಕ್ಷಿಸಿದ ಭಾಗವಹಿಸುವಿಕೆಯನ್ನು ಏಕೆ ನೋಡಲಿಲ್ಲ ಎಂದು ಆಗಾಗ್ಗೆ ಆಶ್ಚರ್ಯ ಪಡುತ್ತಿದ್ದರು. ಪ್ರತಿ ಪೋಷಕರ ಸಭೆಗೆ ಎಚ್ಚರಿಕೆಯಿಂದ ಯೋಜನೆ ಮಾಡಲಾಗುತ್ತಿತ್ತು - ಶಿಕ್ಷಕರ ವಿಚಾರಗಳು, ಚಟುವಟಿಕೆಗಳು ಮತ್ತು ಚರ್ಚೆಗಳನ್ನು ಸಿದ್ಧಪಡಿಸುತ್ತಿದ್ದರು - ಆದರೆ, ಅನೇಕ ಪೋಷಕರು ಹಾಜರಾಗಲಿಲ್ಲ. ಅಂತಹ ಪ್ರಮುಖ ಸಭೆಗಳಲ್ಲಿ ಇಷ್ಟೊಂದು ಶ್ರಮವಹಿಸಿ ಖಾಲಿ ಕುರ್ಚಿಗಳನ್ನು ನೋಡುವುದು ನಿರುತ್ಸಾಹಕರವೆನಿಸಿತು.

ಶ್ರೀಮತಿ ಶ್ಯಾಮಲಾ ಅವರು ಪೋಷಕರ ಸಭೆಯ ಕರಪತ್ರವನ್ನು ಸ್ವೀಕರಿಸಿದಾಗ ವಿಷಯಗಳು ಬದಲಾಗಲು ಪ್ರಾರಂಭಿಸಿದವು, ಇದು ಪೋಷಕರ ಸಭೆಗಳನ್ನು ಹೇಗೆ ನಡೆಸಬಹುದು ಎಂಬುದರ ಕುರಿತು ಹೊಸ ಚಿಂತನೆಯ ಮಾರ್ಗವನ್ನು ಹುಟ್ಟುಹಾಕಿತು. ಕರಪತ್ರದಲ್ಲಿನ ವಿಚಾರಗಳು ಪ್ರಾಯೋಗಿಕ ಮತ್ತು ಪ್ರೇರಕವೆಂದು ಭಾವಿಸಿದವು. ಇದು ಒಂದು ಪ್ರಮುಖ ಪ್ರಶ್ನೆಯ ಬಗ್ಗೆ ಆಳವಾಗಿ ಚಿಂತಿಸುವಂತೆ ಮಾಡಿತು, ಪೋಷಕರು ನಮ್ಮ ಸಭೆಗಳಲ್ಲಿ ನಿಜವಾಗಿಯೂ ಆರಾಮದಾಯಕವಾಗಿದ್ದಾರೆಯೇ?

ಸಮುದಾಯದ ಅನೇಕ ಪೋಷಕರು ವಿಭಿನ್ನ ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ಚರ್ಚೆಗಳು ಒಂದೇ ಭಾಷೆಯಲ್ಲಿ ನಡೆದಾಗ ಭಾಗವಹಿಸುವ ಆತ್ಮವಿಶ್ವಾಸವಿಲ್ಲದಿರಬಹುದು ಎಂದು ಅವರು ಅರಿತುಕೊಂಡಳು. ಇದನ್ನು ಬದಲಾಯಿಸಲು ನಿರ್ಧರಿಸಿದ ಶ್ಯಾಮಲಾ ಸರಳವಾದ ಆದರೆ ಶಕ್ತಿಯುತವಾದ ತಂತ್ರವನ್ನು ಪರಿಚಯಿಸಿದರು. ಪೋಷಕರ ಮಾತೃಭಾಷೆಯನ್ನು ಗೌರವಿಸಿ ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಪಾಲಕರ ಸಭೆಗಳನ್ನು ನಡೆಸಬೇಕೆಂದು ಅವರು ನಿರ್ಧರಿಸಿದರು.



ಇದನ್ನು ಸಾಧ್ಯವಾಗಿಸಲು, ಅವರು ಶಿಕ್ಷಕರಿಗೆ ಮತ್ತು ಈ ಪ್ರತಿಯೊಂದು ಭಾಷೆಯನ್ನು ಮಾತನಾಡಲು ಆರಾಮದಾಯಕವಾಗಿದ್ದ ಕೆಲವು ಸಕ್ರಿಯ ಪೋಷಕರಿಗೆ ಜವಾಬ್ದಾರಿಗಳನ್ನು ವಹಿಸಿದರು.

ಸಭೆಯ ಆಹ್ವಾನಗಳನ್ನು ವಿವಿಧ ಭಾಷೆಗಳಲ್ಲಿ ತಯಾರಿ ಮಾಡಿ ಪೋಷಕರೊಂದಿಗೆ ಕಳುಹಿಸಲಾಯಿತು, ಇದರಿಂದಾಗಿ ಪ್ರತಿಯೊಬ್ಬ ಪೋಷಕರು ಸಂದೇಶವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡರು ಮತ್ತು ವೈಯಕ್ತಿಕವಾಗಿ ಸ್ವಾಗತಿಸಲ್ಪಟ್ಟರು. ಪೋಷಕರ ಸಭೆಯಂದು ಪೋಷಕರನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹರ್ಷಚಿತ್ತದಿಂದ ಸ್ವಾಗತಿಸಿದರು ಮತ್ತು ಅವರನ್ನು ತೊಡಗಿಸಿಕೊಳ್ಳಲು ಮೋಜಿನ ಚಟುವಟಿಕೆಗಳನ್ನು ಆಯೋಜಿಸಿದರು, ಪೋಷಕರ ಪಾಲ್ಗೊಳ್ಳುವಿಕೆಗೆ ಮೆಚ್ಚುಗೆ ವ್ಯಕ್ತಪಡಿಸಿದರು ಮತ್ತು ವಾತಾವರಣವು ಉತ್ಸಾಹಭರಿತ ಮತ್ತು ಸಂತೋಷದಾಯಕವಾಗಿತ್ತು.



ಬದಲಾವಣೆ ತಕ್ಷಣ ಮತ್ತು ಪ್ರಭಾವಶಾಲಿಯಾಯಿತು. ಮೊದಲು ಶಾಂತವಾಗಿ ಕುಳಿತಿದ್ದ ಪೋಷಕರು ಈಗ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಮತ್ತು ತಮ್ಮದೇ ಆದ ಭಾಷೆಯಲ್ಲಿ ಕೇಳಲು ಮತ್ತು ಮಾತನಾಡಲು ಸಾಧ್ಯವಾದ ಕಾರಣ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಒಂದು ಕಾಲದಲ್ಲಿ ಔಪಚಾರಿಕವಾಗಿದ್ದ ಸಭೆಯು ಇದ್ದಕ್ಕಿದ್ದಂತೆ ಸ್ವಾಗತಾರ್ಹ ಮತ್ತು ಅರ್ಥಪೂರ್ಣವೆನಿಸಿತು.



ಅದರ ನಂತರ GHPS ತಾವರೆಕೆರೆ ಮುಂದಿನ PTM ನಲ್ಲಿ ಸುಮಾರು 95% ಪೋಷಕರ ಭಾಗವಹಿಸುವಿಕೆಯನ್ನು ಕಂಡಿತು. ಶ್ಯಾಮಲಾ ಮತ್ತು ಅವರ ಸಿಬ್ಬಂದಿಗೆ, ಇದು ನಿಜವಾದ "ವಾವ್ ಕ್ಷಣ"ವಾಗಿತ್ತು. ಪೋಷಕರ ಭಾಷೆಯಲ್ಲಿ ಹೇಳುವುದಾದರೆ, ಒಂದು ಸಣ್ಣ ಕಲ್ಪನೆಯು ಶಾಲೆ ಮತ್ತು ಅದರ ಸಮುದಾಯದ ನಡುವಿನ ಸಂಬಂಧವನ್ನು ಪರಿವರ್ತಿಸಿತು.



ಈ ಅನುಭವವು ಕೆಲವೊಮ್ಮೆ ಸಣ್ಣ ಬದಲಾವಣೆಗಳು ದೊಡ್ಡ ಪರಿಣಾಮವನ್ನು ಉಂಟುಮಾಡಬಹುದು ಎಂದು ಸುಂದರವಾಗಿ ತೋರಿಸಿದೆ.



# ಮಕ್ಕಳ ನಾಯಕತ್ವ ಮತ್ತು ಸೃಜನಶೀಲತೆಗೆ ವೇದಿಕೆಯಾಗಿ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಕಾರ್ಯಕ್ರಮ

## ಕಾರ್ತಿಕ್ ಹಾದಿಮನಿ

### ವಿದ್ಯಾರ್ಥಿ

"ನಾನು ಮೊದಲು ಶಾಲೆಗೆ ಸೇರಿದಾಗ, ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು, ಅಲ್ಲಿ ವಿದ್ಯಾರ್ಥಿಗಳು ಪ್ರಸ್ತುತಿಗಳಿಗಾಗಿ ವೇದಿಕೆಯನ್ನು ಸಕ್ರಿಯವಾಗಿ ಬಳಸುತ್ತಿದ್ದರು. ನಾನು ಇದನ್ನು ಒಬ್ಬ ಶಿಕ್ಷಕರೊಂದಿಗೆ ಚರ್ಚಿಸಿದೆ, ನನಗೆ ಪ್ರಸ್ತುತಿ ನೀಡಲು ಹೇಗೆ ಅವಕಾಶ ಸಿಗಬಹುದು ಎಂದು ಕೇಳಿದೆ. ನಾನು ಪ್ರದರ್ಶಿಸಲು ಬಯಸುವ ವಿಷಯಗಳು ಮತ್ತು ಕೌಶಲ್ಯಗಳನ್ನು ಸೂಚಿಸಿದರೆ ಅವರು ವೇದಿಕೆಯನ್ನು ಹಂಚಿಕೊಳ್ಳುತ್ತಾರೆ ಎಂದು ಶಿಕ್ಷಕರು ಉತ್ತರಿಸಿದರು. ಮನೆಯಲ್ಲಿ ನನ್ನ ಪೋಷಕರ ಸಹಾಯದಿಂದ ನಾನು ಹೊಸ ಒಗಟುಗಳು ಮತ್ತು ಗಾದೆ ಮಾತುಗಳನ್ನು ಕಲಿತಿದ್ದೇನೆ. ನಾನು ಅವುಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದೆ ಮತ್ತು ಪ್ರತಿಯೊಂದರ ಅರ್ಥವನ್ನು ಅರ್ಥಮಾಡಿಕೊಂಡೆ. ಅಂತಿಮವಾಗಿ ನಾನು ಒಗಟುಗಳು ಮತ್ತು ಗಾದೆ ಮಾತುಗಳನ್ನು ಯೋಜಿಸಿ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು ಅವುಗಳನ್ನು ಪ್ರಸ್ತುತಪಡಿಸಿದೆ.
ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಶಾಲೆಯಲ್ಲಿನ ವಿದ್ಯಾರ್ಥಿ ಜೀವನವನ್ನು ಪ್ರೇರೇಪಿಸಿತು ಮತ್ತು ಪ್ರಭಾವಿಸಿತು."



ಒಗಟುಗಳು ಮತ್ತು ಗಾದೆ ಮಾತುಗಳನ್ನು ಯೋಜಿಸಿ ಬೆಳಗಿನ ಸಭೆಯಲ್ಲಿ ಪ್ರಸ್ತುತಪಡಿಸಿದರು.

ಶಾಲೆಯ ನಿಯಮಿತ ಬೆಳಗಿನ ಅಸೆಂಬ್ಲಿ ಚಟುವಟಿಕೆಗಳಿಂದ ಅವನು ನಿಜವಾಗಿಯೂ ಸ್ಫೂರ್ತಿ ಪಡೆದಿದ್ದಾನೆ.

ವಿದ್ಯಾರ್ಥಿಗಳು ಪ್ರಸ್ತುತಿಗಳಿಗಾಗಿ ವೇದಿಕೆಯನ್ನು ಸಕ್ರಿಯವಾಗಿ ಬಳಸಿದರು.




ಮಂತ್ರ4ಚೇಂಜ್ ಕಳೆದ ಎರಡು ವರ್ಷಗಳಿಂದ ಬೆಂಗಳೂರು ನಗರ ಡಯಟ್ ಜೊತೆ ಕೆಲಸ ಮಾಡುತ್ತಿದೆ. ಈ ತಂಡವು ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಬೆಂಬಲವನ್ನು ನೀಡುತ್ತಿದೆ ಮತ್ತು FLN ರೀಚ್ ಪ್ರೋಗ್ರಾಂ, ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಮತ್ತು ಪೋಷಕರ ಸಭೆಗಳಂತಹ ಉಪಕ್ರಮಗಳಿಗೆ ಸಹಯೋಗದೊಂದಿಗೆ ಸಹಕಾರ ನೀಡಿದೆ. ಅವರು ಡಯಟ್ ಮತ್ತು ಬ್ಲಾಕ್ ಕಚೇರಿಗಳ ನವೀಕರಣವನ್ನು ಮಾಡಿಕೊಟ್ಟಿದ್ದಾರೆ. ಈ ಪ್ರಯತ್ನಗಳ ಮೂಲಕ ನಾವು ಸ್ಪಷ್ಟ ಪರಿಣಾಮವನ್ನು ನೋಡಲು ಸಾಧ್ಯವಾಗಿದೆ. ಈ ಪಾಲುದಾರಿಕೆಯನ್ನು ಮುಂದುವರಿಸಲು ಮತ್ತು ಮಕ್ಕಳಿಗೆ ಕಲಿಕೆಯ ಅನುಭವಗಳನ್ನು ಮತ್ತಷ್ಟು ಹೆಚ್ಚಿಸಲು ನಾವು ಬಯಸುತ್ತೇವೆ.

**ಶಿವಪ್ಪ**
**ಪ್ರಾಂಶುಪಾಲರು ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ)**
**ಬೆಂಗಳೂರು ನಗರ ಜಿಲ್ಲೆ**

ಮಂತ್ರ4ಚೆಂಜ್ ಸಂಸ್ಥೆಯು ಕ್ಲಸ್ಟರ್ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆರಂಭಿಕ ದಿನಗಳಿಂದಲೇ ನಾನು ಅವರನ್ನು ಗಮನಿಸುತ್ತಿದ್ದೇನೆ. ಕಾಲಕ್ರಮೇಣ, ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿ.ಆರ್.ಪಿ ಆಗಿ ನನ್ನ ಅಧಿಕಾರಾವಧಿಯಲ್ಲಿ, ಅವರ ಬೆಳವಣಿಗೆ ಮತ್ತು ಜಿಲ್ಲಾ ಮಟ್ಟಕ್ಕೆ ವಿಸ್ತರಣೆ ಪ್ರೋತ್ಸಾಹದಾಯಕವಾಗಿದೆ.
ಜಿಲ್ಲಾ ಸಂಪನ್ಮೂಲ ತಂಡ (DRT) ರಚನೆಯ ಮೂಲಕ FLN ರೀಚ್ ಕಾರ್ಯಕ್ರಮಕ್ಕಾಗಿ ಅವರು DIET ಜೊತೆ ಸಹಯೋಗದಲ್ಲಿ ಅಭಿವೃದ್ಧಿಪಡಿಸಿದ ವಿಧಾನವು ನನಗೆ ವಿಶೇಷವಾಗಿ ಮೆಚ್ಚುಗೆ ತಂದಿದೆ. ವಿದ್ಯಾರ್ಥಿಗಳ ಕಲಿಕೆಯನ್ನು ಚರ್ಚಿಸಲು, ದತ್ತಾಂಶವನ್ನು ವಿಶ್ಲೇಷಿಸಲು, ಸಂಪನ್ಮೂಲಗಳನ್ನು ರೂಪಿಸಲು ಮತ್ತು ಉತ್ತಮ ಅಭ್ಯಾಸಗಳ ಕುರಿತು ಚಿಂತನೆ ನಡೆಸಲು ಜಿಲ್ಲಾ ಮಟ್ಟದಲ್ಲಿ ಎಲ್ಲಾ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳನ್ನು ಒಟ್ಟುಗೂಡಿಸುವುದು ಬಹಳ ಬಲವಾದ ಹಾಗೂ ಪರಿಣಾಮಕಾರಿ ಕ್ರಮವಾಗಿದೆ.
ಕಲಿಕೆಯ ಫಲಿತಾಂಶಗಳನ್ನು ಸುಧಾರಿಸುವ ದಿಕ್ಕಿನಲ್ಲಿ ಇಂತಹ ಕೇಂದ್ರೀಕೃತ ಮತ್ತು ಸಹಯೋಗಾತ್ಮಕ ಪ್ರಯತ್ನವನ್ನು ನೋಡುವುದು ನಿಜಕ್ಕೂ ಪ್ರೋತ್ಸಾಹದಾಯಕವಾಗಿದೆ.



**ಉಮೇಶ *K H***
**ಕ್ಷೇತ್ರ ಸಂಪನ್ಮೂಲ ವ್ಯಕ್ತಿ- *south 4***



# ಪರಿಣಾಮಕಾರಿ ಬೆಳಗಿನ ಪ್ರಾರ್ಥನಾ ಅವಧಿ

ಬೆಳಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಗಳು ಮೊದಲು ಸೀಮಿತ ಭಾಗವಹಿಸುವಿಕೆಯನ್ನು ನಾವು ಕಾಣಬಹುದಿತ್ತು, ವಿಶೇಷ ದಿನಗಳಲ್ಲಿ ಕೆಲವೇ ವಿದ್ಯಾರ್ಥಿಗಳು ನೇತೃತ್ವ ವಹಿಸುತ್ತಿದ್ದರು. ವಿದ್ಯಾದೀಪ ಕ್ಯಾಲೆಂಡರ್ ನ ಅನುಷ್ಠಾನದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಭಾಗವಹಿಸುವ ಅವಕಾಶವನ್ನು ಒದಗಿಸುತ್ತಿವೆ. ಇದರ ಪರಿಣಾಮವಾಗಿ, ವಿದ್ಯಾರ್ಥಿಗಳ ಆತ್ಮವಿಶ್ವಾಸ, ನಾಯಕತ್ವ ಹಾಗೂ ಪ್ರಸ್ತುತಿ ಕೌಶಲ್ಯಗಳು ಅಭಿವೃದ್ಧಿಯಾಗಲು ಸಹಾಯವಾಗುತ್ತಿದೆ.

**ಸೌಭಾಗ್ಯ**

**ಜಿ.ಎಲ್.ಪಿ.ಎಸ್ ದೇನಾಬ್ಯಾಂಕ್ - ಜಿಗಣಿ**

# ಪೋಷಕರ ಸಬಲೀಕರಣ ಉಪಕ್ರಮಗಳು

ಪೋಷಕರ ಸಬಲೀಕರಣ ಉಪಕ್ರಮವು ಉತ್ತಮವಾಗಿ ಯೋಜಿಸಲಾದ ತಂತ್ರವಾಗಿದ್ದು, ಇದು ಪೋಷಕರಲ್ಲಿ ತಮ್ಮ ಮಗುವಿನ ಶಿಕ್ಷಣದಲ್ಲಿ ಅವರ ಪಾತ್ರದ ಬಗ್ಗೆ ಜಾಗೃತಿ ಮೂಡಿಸುತ್ತದೆ. ಪೋಷಕರ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಪೋಷಕರು ಶೈಕ್ಷಣಿಕವಾಗಿ ಬೆಂಬಲ ನೀಡಲು, ಮನೆಯಲ್ಲಿ ಕಲಿಕಾ ಸ್ಥಳಗಳನ್ನು ಸೃಷ್ಟಿಸಲು ಮತ್ತು ಅರ್ಥಪೂರ್ಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಲಿಯುತ್ತಾರೆ. ಪೋಷಕರ ಒಳಗೊಳ್ಳುವಿಕೆಯನ್ನು ಬಲಪಡಿಸುವ ಮತ್ತು ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಸುಧಾರಿಸುವ ಮೂಲಕ ಈ ಉಪಕ್ರಮವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ.



**ಪ್ರಮಿತಾ ಅದೋನಿ**

**ಪ್ರಾಂಶುಪಾಲರು , ಬೆಂಗಳೂರು ಉತ್ತರ ಜಿಲ್ಲೆ**

# 2026-27 ನೇ ಸಾಲಿನ ಶೈಕ್ಷಣಿಕ ಕಾರ್ಯಕ್ರಮಗಳು

**1. ಪರಿಣಾಮಕಾರಿ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು:**

**Life skill improvement through MA (Effective MA activities)**

FLN + grade wise competencies **+ Life skill**

**2. ಪೋಷಕರ ಸಬಲೀಕರಣ ಕಾರ್ಯಕ್ರಮ:**

**Parental and Community engagement (PEI+SDMC) (PEI)**

Parent participation + **Parent engagement** through capacity building

**3. ಎಫ್.ಎಲ್.ಎನ್. ಕಾರ್ಯಕ್ರಮ:**

**<u>ABL to Reach FLN</u>**

FLN competencies **+ PARAKH competencies**







# ಫೋಟೋ ಗ್ಯಾಲರಿ

## ಬೆಳಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಗಳು










## ಪೋಷಕರ ಸಭೆ





# ಫೋಟೋ ಗ್ಯಾಲರಿ

**ತರಗತಿಯಲ್ಲಿ FLN ಅನುಷ್ಠಾನಕ್ಕಾಗಿ ಮಾರ್ಗದರ್ಶನ ನೀಡಲು ಡಯಟ್ ವತಿಯಿಂದ ಎಲ್ಲಾ ಶಾಲೆಗಳಿಗೆ ಆನ್ಲೈನ್ ಸಭೆ ನೆಡೆಸಿರುವುದು.**







**ತರಗತಿಯಲ್ಲಿ FLN ಚಟುವಟಿಕೆಗಳ ಅನುಷ್ಠಾನ.**





**ಶೈಕ್ಷಣಿಕ ಪ್ರಗತಿ ಸಾಧಿಸಲು ಡಯಟ್ ವತಿಯಿಂದ ವಿಷನ್ ಕಾರ್ಯಾಗಾರ**





## ಶೈಕ್ಷಣಿಕ ಪ್ರಗತಿ ಸಾಧಿಸಲು ಡಯಟ್ ವತಿಯಿಂದ ವಿಷನ್ ಕಾರ್ಯಾಗಾರ





## ವಿವಿಧ ರಾಷ್ಟ್ರ ಹಾಗೂ ರಾಜ್ಯಗಳಿಂದ ಡಯಟ್ ಕಾರ್ಯಕ್ರಮಗಳನ್ನು ಅರ್ಥ ಮಾಡಿಕೊಳ್ಳಲು ಡಯಟ್ ಗೆ ಭೇಟಿ ಮಾಡಿರುವುದು .












Mantra

Inspire. Enable. Transform.

info@mantra4change.com

mantra4change.org

# 733, 17th Cross Road, KR Layout, JP Nagar, 6th Phase
Bengaluru, Karnataka - 560078